ಉಪನ್ಯಾಸ
ಗ್ರಂಥಮಾಲೆ

೨೧೪

# ಭಾರತದ ಆರ್ಥಿಕ ಬೆಳವಣಿಗೆಯ ಗುಣದೋಷಗಳು

ಡಿ. ಎ. ಹೆಗಡೆ ಎಂ. ಎ., ಎಲ್‌ಎಲ್. ಬಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜೂನ್, ೧೯೭೫

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೧೪

# ಭಾರತದ ಆರ್ಥಿಕ ಬೆಳವಣಿಗೆಯ ಗುಣದೋಷಗಳು

ಶ್ರೀ ಡಿ. ಎ. ಹೆಗಡೆ, ಎಂ. ಎ., ಎಲ್ ಎಲ್. ಬಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜೂನ್, ೧೯೭೫

ಪ್ರಕಾಶಕರು :

**ಎಸ್. ಎಸ್. ಒಡೆಯರ,** ಎಂ. ಎ., ಎಲ್ ಎಲ್. ಬಿ.

ಕುಲಸಚಿವರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಜೂನ್, ೧೯೭೫



**ಬೆಲೆ : ೭೫ ಪೈಸೆ**

ಮುದ್ರಕರು :

**ಕೆ. ಜಿ. ಜೋಶಿ**

ಕೆ. ಇ. ಬೋರ್ಡ್ಸ್ ಪ್ರಿಂಟಿಂಗ ಪ್ರೆಸ್,

ಧಾರವಾಡ–೧

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಅದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೧೩ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಿದ್ದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೬-೬-೧೯೭೫

**ಆರ್. ಸಿ. ಹಿರೇಮಠ**
ಕುಲಪತಿ

# ಅರಿಕೆ

ಪ್ರೊಫೆಸರ ಆಲ್ಫ್ರೆಡ್ ಮಾರ್ಷಲ್ ಎಂಬ ಇಂಗ್ಲಂಡದ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಮೂಲತಃ ಗಣಿತ ವಿಷಯದಲ್ಲಿ ತಜ್ಞರು, ಆದರೆ ಅವರು ಅರ್ಥಶಾಸ್ತ್ರಜ್ಞರಾಗಲು ನಿರ್ಧರಿಸಿದ ಕಾರಣವನ್ನು ಹೀಗೆ ವಿವರಿಸಿದ್ದಾರೆ. "ನಾನು ನನ್ನ ರಜಾ ದಿನಗಳಲ್ಲಿ ಅನೇಕ ನಗರಗಳ ಕಡುಬಡವರು ನೆಲೆಸಿರುವ ಭಾಗಗಳಲ್ಲಿ ಸುತ್ತಾಡಿದೆ. ಒಂದು ಓಣಿಯಿಂದ ಇನ್ನೊಂದು ಓಣಿಗೆ ಹೋಗುವಾಗ ಆ ಬಡವರ ಮುಖಗಳನ್ನು ವೀಕ್ಷಿಸುತ್ತಿದ್ದೆ. ಕೂಡಲೇ ನಾನು ಅರ್ಥಶಾಸ್ತ್ರದ ಆಳವಾದ ಅಭ್ಯಾಸ ಮಾಡಲು ನಿರ್ಧಾರ ಕೈಕೊಂಡೆ."

ಅರ್ಥಶಾಸ್ತ್ರದ ಅಭ್ಯಾಸವು ಈ ರೀತಿಯಾಗಿ ಮಾನವನ ತೀರ ಮಹತ್ವದ ಸಮಸ್ಯೆಯಾದ ಈ ಪ್ರಪಂಚದಲ್ಲಿ ಬದುಕುವ ಬಗೆಯನ್ನು ಚರ್ಚಿಸುವ ವಿಷಯವಾಗಿದೆ. ಆರ್ಥಿಕ ಸುಖ ಸಮೃದ್ಧಿ ದೇಶದ ಉಳಿದ ಅನೇಕ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗ, ಅಂತರ್ರಾಷ್ಟ್ರೀಯ ಶಾಂತಿಯು ನೆಲೆ. ಆದುದರಿಂದ ಈ ವಿಷಯದ ಗಹನವಾದ ಅಭ್ಯಾಸ ಅಥವಾ ಯೋಗ್ಯ ತಿಳಿವಳಿಕೆ ಪಡೆದುಕೊಳ್ಳುವದು ಪ್ರತಿಯೊಬ್ಬ ನಾಗರಿಕನಿಗೂ ತುಂಬಾ ಉಪಯುಕ್ತ ಹಾಗೂ ಫಲದಾಯಕ. ಅದರಲ್ಲೂ ಆರ್ಥಿಕ ಬೆಳವಣಿ

ಗೆಯ ವಿಷಯವು ಇಂದು ಭಾರತದಲ್ಲಿ ನಡೆಯುತ್ತಿರುವ ಬಹು ದೊಡ್ಡ ಪ್ರಯೋಗದ ಪ್ರಯತ್ನದ ಅರಿವನ್ನು ಮೂಡಿಸುತ್ತದೆ.

ಈ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದವರು ಯಲ್ಲಾಪುರ ತಾಲೂಕಿನ ಉಮ್ಮಚ್ಚಗಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಈ ವಿಷಯವಾಗಿ ಭಾಷಣ ಮಾಡಲು ಅವಕಾಶ ಕಲ್ಪಿಸಿ ಕೊಟ್ಟದ್ದಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಇದರಂತೆ ಈ ಕಾರ್ಯಕ್ರಮದ ಸ್ಥಳೀಯ ಸಂಘಟಕರಾದ ಶ್ರೀ ಸಿದ್ಧಿವಿನಾಯಕ ಯುವಕ ಮಂಡಳಿಯ ತರುಣ ಮಿತ್ರರಿಗೂ ಅವರ ಉತ್ಸಾಹ, ಆದರ ಸತ್ಕಾರಗಳ ಬಗೆಗೆ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ.

ಅರ್ಥಶಾಸ್ತ್ರದಲ್ಲಿ ಆರ್ಥಿಕ ಬೆಳವಣಿಗೆಯ ಬಗೆಗೆ ಮೈಸೂರ ವಿಶ್ವವಿದ್ಯಾಲಯವು ಸಂಪಾದಿಸಿದ ವಿಶ್ವಕೋಶದಲ್ಲಿ ಲೇಖನ ಬರೆಯಲು ಪ್ರೋತ್ಸಾಹಿಸಿ ಈ ವಿಷಯದ ಆಳವಾದ ಅಭ್ಯಾಸ ಮಾಡಲು ಮೊಟ್ಟಮೊದಲು ಅವಕಾಶ ಕಲ್ಪಿಸಿ ಕೊಟ್ಟ ಕರ್ನಾಟಕ ಸರಕಾರದ ಆರ್ಥಿಕ ಸಲಹೆಗಾರರಾದ ಡಾ. ಡಿ. ಎಮ್. ನಂಜುಂಡಪ್ಪ, ಎಮ್. ಎ., ಪಿಎಚ್. ಡಿ. ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಕೊನೆಯದಾಗಿ ಈ ಭಾಷಣ ಹಾಗೂ ಕನ್ನಡದಲ್ಲಿ ವಿಸ್ತೃತ ಲೇಖನ ಬರೆಯುವದರಲ್ಲಿ ಮಾರ್ಗದರ್ಶನ ನೀಡಿದ ಪ್ರಿ. ಎಲ್. ಟಿ. ಶರ್ಮಾ, ಎಮ್. ಎಮ್. ಕಾಲೇಜ, ಸಿರ್ಸಿ ಹಾಗೂ

ಪ್ರಿ. ಬಿ. ಎಚ್. ಶ್ರೀಧರ, ಎಮ್. ಜಿ. ಸಿ. ಆರ್ಟ್ಸ ಕಾಲೇಜ, ಸಿದ್ದಾಪುರ ಇವರಿಗೂ ಇದಕ್ಕೆ ಅವಕಾಶ ಒದಗಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಂ. ಜಿ. ಸಿ. ಆರ್ಟ್ಸ ಕಾಲೇಜ
ಸಿದ್ದಾಪುರ (ಉ. ಕ.)
೧೫–೬–೧೯೭೫

**ಡಿ. ಎ. ಹೆಗಡೆ**
ರೀಡರ, ಅರ್ಥಶಾಸ್ತ್ರ

# ಪರಿವಿಡಿ

# ೧. ರಾಜಕೀಯ ಸ್ವಾತಂತ್ರ್ಯದ ಗುರಿ

ಭಾರತದ ರಾಜಕೀಯ ಸ್ವಾತಂತ್ರ್ಯದ ಮುಖ್ಯ ಗುರಿಯು ಆರ್ಥಿಕ ಪ್ರಗತಿಯನ್ನು ಸಾಧಿಸುವದಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಭಾರತವು ಬ್ರಿಟಿಶ ಆಡಳಿತದಿಂದ ಸ್ವಾತಂತ್ರ್ಯವನ್ನು ಪಡೆದದ್ದು ಅಗಸ್ಟ ೧೪, ೧೯೪೭ ನೆಯ ನಡುರಾತ್ರಿಯ ಸಮಯ. ಈ ಸಮಯದಲ್ಲಿ ಮಂಗಲವಾದ್ಯಗಳು ಹಾಗೂ ಶಂಖಧ್ವನಿಯು ಮೊಳಗುತ್ತಿರುವಾಗ ಭಾರತವು ಪರಕೀಯ ಆಡಳಿತದ ಶೃಂಖಲೆಗಳಿಂದ ಸ್ವಾತಂತ್ರ್ಯದತ್ತ ಸಾಗಿತು. ಈ ಸಮಯದಲ್ಲಿ ದೊಡ್ಡ ಪಟ್ಟಣಗಳಲ್ಲಿ ಎಲ್ಲೆಲ್ಲೂ ಸಂಭ್ರಮದ ವಾತಾವರಣವಿತ್ತು. ದೊಡ್ಡ ದೊಡ್ಡ ಸರಕಾರಿ ಕಟ್ಟಡಗಳನ್ನು ವಿದ್ಯುದ್ದೀಪಗಳಿಂದ ಶೃಂಗರಿಸಿದ್ದರು. ಬೀದಿ ಬೀದಿಗಳಲ್ಲಿ ಜನರು ನೆರೆದು ಸ್ವಾತಂತ್ರ್ಯದ ಬರುವನ್ನು ಸಂಭ್ರಮದಿಂದ ಸ್ವಾಗತಿಸಿದರು. ಈ ಸಂಭ್ರಮಗಳ ಪ್ರತಿಧ್ವನಿ ಹಳ್ಳಿಗಳಲ್ಲಿಯೂ ಕೇಳಿಬರುತ್ತಿತ್ತು.

ಇಂಥ ಸಮಯದಲ್ಲಿ ನಮ್ಮ ರಾಜಧಾನಿಯಾದ ಹೊಸ ದಿಲ್ಲಿಯ ಪಾರ್ಲಿಮೆಂಟ ಭವನದ ಸುತ್ತುಮುತ್ತಲು ಲಕ್ಷಾಂತರ ಜನರು ನೆರೆದಿದ್ದರು. ಪಾರ್ಲಿಮೆಂಟ ಭವನದ ಮಧ್ಯವರ್ತಿ ಸಭಾಭವನದಲ್ಲಿ ಒಂದು ಗಂಭೀರ ವಾತಾವರಣ ನೆಲೆಸಿತ್ತು. ಭಾರತದ ಸಂವಿಧಾನ ರಚನಾಸಮಿತಿಯ ಸದಸ್ಯರು. ದೇಶದ ಪ್ರತಿಷ್ಠಿತ ನಾಗರಿಕರು ಹಾಗೂ ಅಧಿಕಾರಿ ವರ್ಗದವರು ಬಹುಸಂಖ್ಯೆ

ಯಲ್ಲಿ ಸೇರಿದಿದ್ದರು. ಸರಿಯಾಗಿ ರಾತ್ರಿ ೧೨ ಘಂಟೆಗೆ ಪಂಡಿತ ನೆಹರೂರವರು ಪ್ರಧಾನಮಂತ್ರಿಯೆಂದು ಪ್ರಮಾಣ ವಚನ ಸ್ವೀಕರಿಸಿದನಂತರ, ಸೇರಿದ ಸಭಿಕರನ್ನುದ್ದೇಶಿಸಿ ಗಂಭೀರವಾದ ಭಾಷಣವೊಂದನ್ನು ಮಾಡಿದರು. ಆ ಭಾಷಣದಲ್ಲಿ ಪಂಡಿತ ನೆಹರೂರವರು ಮಹಾತ್ಮಾಗಾಂಧಿಯವರನ್ನು ಸ್ಮರಿಸಿಕೊಂಡು ಉದ್ಗಾರದಿಂದ ಹೇಳಿದ ಮಾತೊಂದು ತೀರ ಅರ್ಥಗರ್ಭಿತವಾಗಿದೆ: "ನಮ್ಮ ಪೀಳಿಗೆಯ ಅತಿ ಶ್ರೇಷ್ಠ ಮಾನವನ ಒಂದು ಆಕಾಂಕ್ಷೆಯೆಂದರೆ. to wipe every tear from every eye—ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ಕಣ್ಣಿನಲ್ಲಿಯ ಕಣ್ಣೀರನ್ನೂ ತೊಡೆದು ಹಾಕುವ ಈ ಆಕಾಂಕ್ಷೆಯನ್ನು ನೆರವೇರಿಸುವದು ನಮ್ಮ ಜೀವಮಾನದಲ್ಲಿ ಸಾಧ್ಯವಾಗುವದೆಂದು ನಾನು ಹೇಳಲಾರೆ, ಆದರೆ, ಎಲ್ಲಿಯವರೆಗೆ ಕಣ್ಣೀರು ಹಾಗೂ ಕಷ್ಟಕಾರ್ಪಣ್ಯಗಳು ಇರುವವೋ ಆಲ್ಲಿಯವರೆಗೆ ನಮ್ಮ ಕಾರ್ಯ ಮುಗಿಯಿತೆಂದು ಬಗೆಯುವಂತಿಲ್ಲ." ಇದರಿಂದ ಸ್ವಾತಂತ್ರ್ಯ ಸಮರವನ್ನು ನಡೆಸಿದ ನಮ್ಮ ಮುಂದಾಳುಗಳ ಮೂಲ ಉದ್ದೇಶ ಸುಸ್ಪಷ್ಟವಾಗುವದು. ಮುಂದೆ ೧೯೫೦ ರಲ್ಲಿ ಜಾರಿಗೊಳಿಸಲಾದ ಸ್ವತಂತ್ರ ಭಾರತದ ಸಂವಿಧಾನದ ಮೊದಲು ವಾಕ್ಯ (Preamble) ದಲ್ಲಿ ಹಾಗೂ ರಾಷ್ಟ್ರನಿರ್ದೇಶಕ ತತ್ತ್ವಗಳಲ್ಲಿ ಆರ್ಥಿಕ ಸ್ವಾತಂತ್ರ್ಯದ ವ್ಯಾಪ್ತಿ ಹಾಗೂ ವಿವರಣೆಗಳು ಸುಲಲಿತವಾಗಿ ಮೂಡಿಬಂದಿವೆ. ಆರ್ಥಿಕ ನ್ಯಾಯ ಹಾಗೂ ಸಮಾನಾವಕಾಶಗಳನ್ನು ದೊರಕಿಸಿಕೊಡುವ ಮಹದುದ್ದೇಶಗಳನ್ನು ಸಾಧಿಸುವದು ರಾಜಕೀಯ ಸ್ವಾತಂತ್ರ್ಯದ ಗುರಿಯೆಂಬುದು ನಿರ್ವಿವಾದ. ಈ ಉದ್ದೇಶಗಳನ್ನು ಪೂರೈಸಲು ಹಾಗೂ ನಮ್ಮ ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ

ಮಾಲೆಯಲ್ಲಿ ಸೇರಿಸಲು ಆರ್ಥಿಕ ಬೆಳವಣಿಗೆಯನ್ನು ಪುರಸ್ಕರಿಸುವದು ಅವಶ್ಯವಾಗಿದೆ.

# ೨. ಆರ್ಥಿಕ ಬೆಳವಣಿಗೆಯೆಂದರೇನು ?

ಆರ್ಥಿಕ ಬೆಳವಣಿಗೆಯ ವಿಷಯವು ಇಂದಿನ ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಒಂದು ಮಹತ್ವದ ಸ್ಥಾನವನ್ನು ಗಳಿಸಿಕೊಂಡಿರುವದು. ಇದು ಯಥಾಯೋಗ್ಯವಾಗಿದೆ. ಯಾಕೆಂದರೆ, ಅರ್ಥಶಾಸ್ತ್ರವು ಸಮಾಜ ವಿಜ್ಞಾನವೆಂದು ಪರಿಗಣಿಸಲ್ಪಡುವದರಿಂದ, ತತ್ಕಾಲೀನ ಸಮಾಜದಲ್ಲಿಯ ಅವಶ್ಯಕತೆಗಳಿಗನುಗುಣವಾಗಿ ವಿಷಯಗಳನ್ನು ಚರ್ಚಿಸುವುದು. ಸಿದ್ಧಾಂತಗಳನ್ನು ಮಂಡಿಸುವುದು ಮುಖ್ಯ ಮನೋಧರ್ಮವೆನಿಸುವುದು. ಹಿಂದೆ ಹದಿನೆಂಟನೆಯ ಶತಮಾನದಲ್ಲಿ ಯುರೋಪದ ಅನೇಕ ರಾಷ್ಟ್ರಗಳು ಆರ್ಥಿಕ ಬೆಳವಣಿಗೆಯ ಮೊದಲಂತಸ್ತಿನಲ್ಲಿದ್ದಾಗ ಆಡಮ್ ಸ್ಮಿಥ. ಜೆ. ಎಸ್. ಮಿಲ್. ಜೆ. ಬಿ. ಸೇ.. ಶುಂ. ಪೀಟರ್ ಮುಂತಾದ ಅನೇಕ ಅರ್ಥಶಾಸ್ತ್ರಜ್ಞರು ತಮ್ಮ ವಿಚಾರ ಪರಿಪ್ಲುತ ಲೇಖನಗಳಿಂದ ಈ ದೇಶಗಳ ಅಭಿವೃದ್ಧಿಗೆ ಮಾರ್ಗದರ್ಶನ ಮಾಡಿದರು. ಮುಂದೆ ಕೆಲವು ವರ್ಷಗಳ ವರೆಗೆ ಆರ್ಥಿಕ ಬೆಳವಣಿಗೆಯ ಚರ್ಚೆಯು ಮಹತ್ವವನ್ನು ಕಳೆದುಕೊಂಡಿತು. ಆದರೆ ಈ ವಿಷಯವು ಪುನಶ್ಚೇತನಗೊಂಡಿದ್ದು ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಲ್ಲಿ. ಯುರೋಪದ ಅನೇಕ ರಾಷ್ಟ್ರಗಳು ವ್ಯಾಪಾರಿ ಚಕ್ರವೆಂಬ ಒಂದು

ವಿಷಮ ಸಂಕಟವನ್ನು ಎದುರಿಸಿ ಘಾಸಿಗೊಂಡ ಸಮಯದಲ್ಲಿ ಬ್ರಿಟನದ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಲಾರ್ಡಕೇನ್ಸ ಹಾಗೂ ಪ್ರೊ. ಹೆರಾಡ್ ಎಂಬಿಬ್ಬರು ಆರ್ಥಿಕ ಬೆಳವಣಿಗೆಯ ಚರ್ಚೆಯನ್ನು ಪುನರಾರಂಭಿಸಿದರು. ವ್ಯಾಪಾರಿ ಚಕ್ರದಲ್ಲಿ ಅಡಕವಾಗಿರುವ ದುಷ್ಟ ಶಕ್ತಿಗಳನ್ನು ನಿಯಂತ್ರಿಸಲು ಹಾಗೂ ನಿಗ್ರಹಿಸಲು ಆರ್ಥಿಕ ಬೆಳವಣಿಗೆಯ ನೀತಿಯನ್ನು ಈ ರಾಷ್ಟ್ರಗಳ ಸರಕಾರಗಳು ಪುರಸ್ಕರಿಸುವದು ಅನಿವಾರ್ಯವೆಂದು ಪ್ರತಿಪಾದಿಸಿದರು. ಅಲ್ಲದೆ ಆರ್ಥಿಕಬೆಳವಣಿಗೆಯ ನೀತಿ ಯಾವ ತಂತ್ರವನ್ನನುಸರಿಸಬೇಕೆಂಬುದನ್ನು ಕೂಡ ಮಾದರಿಗಳನ್ನು ರಚಿಸಿ ವಿವರಿಸಿದರು. ಇವರ ವಿಚಾರಧಾರೆಯಿಂದ ಪ್ರಭಾವಿತರಾದ ಅಮೇರಿಕೆಯ ಆಗಿನ ಅಧ್ಯಕ್ಷರಾದ ರೂಸವೆಲ್ಟರು ತಮ್ಮ "ನ್ಯೂ ಡೀಲ್" ಎಂಬ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದು ದೇಶದಲ್ಲಿಯ ವ್ಯಾಪಾರಿ ಚಕ್ರದ ಪರಿಣಾಮಗಳನ್ನು ತೀವ್ರವಾಗಿ ಹಿಡಿತದಲ್ಲಿ ತರುವುದರಲ್ಲಿ ಯಶಸ್ವಿಯಾದರು. ಇದಾದನಂತರ ಆರ್ಥಿಕ ಬೆಳವಣಿಗೆಯ ವಿಷಯವು ಎರಡನೇ ಮಹಾಯುದ್ಧದ ನಂತರ ಸ್ವಾತಂತ್ರ್ಯಗಳಿಸಿದ ದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ದಾರಿದೀಪವಾಗಿದೆ. ಅಲ್ಲದೆ, ಜಗತ್ತಿನ ಎಲ್ಲೆಡೆಯಲ್ಲಿಯೂ ಆರ್ಥಿಕ ಬೆಳವಣಿಗೆಯು ಅನೇಕ ಆಕಾಂಕ್ಷೆಗಳ ಸಾಧನೆಗೆ ಕೀಲಿಕೈಯಾಗಿದೆ ಎಂಬ ದೃಢನಂಬಿಗೆ ಬೆಳೆಯುತ್ತಿದೆ. ಆರ್ಥಿಕ ಪ್ರಗತಿಯನ್ನು ಸಾಧಿಸಿದ ರಾಷ್ಟ್ರಗಳೂ ಕೂಡ ಆರ್ಥಿಕ ಬೆಳವಣಿಗೆಯು ವ್ಯಾಪಾರೀ ಚಕ್ರವನ್ನು ಪ್ರತಿಬಂಧಿಸುವ ಸಾಧನವಲ್ಲದೆ ಅದಕ್ಕೆ ನಿರ್ದಿಷ್ಟ ನಿಯರ್ಾತ ಮೌಲ್ಯವೂ ಇದೆ ಎಂಬುದನ್ನು ಮನಗಂಡಿರುವರು.

ಆರ್ಥಿಕ ಬೆಳವಣಿಗೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿವಿಧ ಪರಿಸ್ಥಿತಿಗಳಲ್ಲಿರುವ ಅರ್ಥ ವ್ಯವಸ್ಥೆಗಳನ್ನು ತುಲನೆಮಾಡುವದು ಆವಶ್ಯವೆನಿಸುತ್ತದೆ. ಒಂದು ರಾಷ್ಟ್ರದ ಅರ್ಥ ವ್ಯವಸ್ಥೆಯು ಒಂದೇ ಸಮತೋಲದಲ್ಲಿರುವಾಗ ಯಾವುದೇ ಗಮನಸೆಳೆಯಬಹುದಾದ ಆರ್ಥಿಕ ಬದಲಾವಣೆಗಳುಂಟಾಗುವದಿಲ್ಲ. ಇಂಥ ಪರಿಸ್ಥಿತಿಯಲ್ಲಿರುವ ಆರ್ಥಿಕ ವ್ಯವಸ್ಥೆಯನ್ನು ಸ್ಥಿರ ಪರಿಸ್ಥಿತಿಯಲ್ಲಿರುವ ( State ) ಅರ್ಥ ವ್ಯವಸ್ಥೆ ಎನ್ನುವರು. ಸ್ಥಿರಪರಿಸ್ಥಿತಿಯು ಗತಿಹೀನತೆಯನ್ನು ಸೂಚಿಸುವದಿಲ್ಲ. ಒಂದೇ ವೇಗದಿಂದ ಚಲಿಸುತ್ತಿರುವ ರೈಲು ಬಂಡಿಗೆ ಅದನ್ನು ಹೋಲಿಸಬಹುದು. ಆದರೆ ಗತಿಶೀಲ ( Dynamic ) ಆರ್ಥಿಕ ವ್ಯವಸ್ಥೆಯು ಸದ್ಯದಲ್ಲಿದ್ದ ಸಮತೋಲ ಪರಿಸ್ಥಿತಿಯನ್ನು ಕದಡಿ ತೀವ್ರ ಆರ್ಥಿಕ ಬದಲಾವಣೆಗಳನ್ನುಂಟು ಮಾಡಬಹುದಾದ ಅಂಶಗಳಿಗೆ ಚಾಲನೆಯಿತ್ತು ಈಗಿರುವದಕ್ಕಿಂತ ಹೆಚ್ಚಿನ ಸ್ಥರದಲ್ಲಿ ಸಮತೋಲವೇರ್ಪಡುವಂತೆ ಮಾಡುವ ಕ್ರಿಯೆಯು ಆರ್ಥಿಕ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ. ಆರ್ಥಿಕಬೆಳವಣಿಗೆಯೆಂದರೆ ಕೇವಲ ಅಸ್ತಿತ್ವಮಟ್ಟದಲ್ಲಿರುವ ಒಂದು ಅರ್ಥ ವ್ಯವಸ್ಥೆಯನ್ನು ಅತಿ ಕಡಿಮೆ ಸಮಯದಲ್ಲಿ ಅಂದರೆ ಕೇವಲ ಕೆಲವೇ ದಶಕಗಳಲ್ಲಿ. ಶತಮಾನಗಳಲ್ಲಲ್ಲ—ತೀವ್ರವಾಗಿ ಪ್ರಗತಿಹೊಂದುವಂತೆ ಅಂದರೆ, ಸ್ಪಷ್ಟ ಗುರುತಿಸಬಹುದಾಂಥ ಮಟ್ಟದ ಅರ್ಥ ವ್ಯವಸ್ಥೆಯನ್ನಾಗಿ ಪರಿವರ್ತಿಸುವ ಪ್ರಯತ್ನವೆನ್ನಬಹುದು. ಈಗಾಗಲೇ ಅಭಿವೃದ್ಧಿಯನ್ನು ಹೊಂದಿದ ರಾಷ್ಟ್ರಗಳ ಮಟ್ಟಿಗೆ, ಆರ್ಥಿಕ ಬೆಳವಣಿಗೆಯೆಂದರೆ ಪ್ರಸ್ತುತ ಬೆಳವಣಿಗೆಯ ವೇಗವನ್ನು ಸ್ಥಿರಗೊಳಿಸು

ವದು ಇಲ್ಲವೆ ತೀವ್ರಗೊಳಿಸುವದು. ಅನೇಕ ಸಲ ಇಂಥ ಆರ್ಥಿಕ ಬೆಳವಣಿಗೆಯನ್ನು "ಔದ್ಯಮೀಕರಣ" ಎಂದು ವರ್ಣಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ತೀವ್ರ ವೇಗದ ಆರ್ಥಿಕ ಬೆಳವಣಿಗೆಯು ಔದ್ಯಮೀಕರಣದ ಸಮಯದಲ್ಲಿಯೇ ಸಾಧಿಸಲ್ಪಟ್ಟಿರುವದು ಕಂಡುಬರುತ್ತದೆ. ಆದರೆ ಆರ್ಥಿಕ ಬೆಳವಣಿಗೆಯನ್ನು ಆರ್ಥಿಕ ವ್ಯವಹಾರಗಳಲ್ಲಿ ಲಾಭಹಾನಿಯ ಪ್ರಜ್ಞೆಯನ್ನುಂಟು ಮಾಡುವ ಪ್ರಯತ್ನವೆಂದರೆ ಹೆಚ್ಚು ಸಮಂಜಸ. ಯಾಕೆಂದರೆ. ಕೇವಲ ಅಸ್ತಿತ್ವಮಟ್ಟದಲ್ಲಿರುವ ಕೃಷಿ ಪ್ರಧಾನವಾದ ದೇಶವಾದರೂ ಉತ್ಪಾದನೆಯ ತಂತ್ರದಲ್ಲಿ ಸೂಕ್ತ ಬದಲಾವಣೆಗಳನ್ನು ಪ್ರಚೋದಿಸಿ ಹಾಗೂ ಪೇಟೆಯ ನಿಯಮಗಳನ್ನು ಪೈಪೋಟಿಗೆ ಹೆಚ್ಚು ಅವಕಾಶವಿರುವಂತೆ ಸುಧಾರಿಸಿ ಔದ್ಯಮೀಕರಣವಿಲ್ಲದೆಯೇ ಆರ್ಥಿಕ ಬೆಳವಣಿಗೆಯನ್ನು ಹೊಂದಬಲ್ಲದು.

ಆರ್ಥಿಕ ಬೆಳವಣಿಗೆಯು ಯಾವುದೇ ಒಂದು ಗುರಿಯೆಂದು ಪರಿಗಣಿಸಲ್ಪಡುವದಿಲ್ಲ. ಅದರೆ ಉಳಿದ ಗುರಿಗಳನ್ನು ಪೂರೈಸುವ ಒಂದು ಸಾಧನವಾಗಿದೆ. ಆದುದರಿಂದ ನಾವು ಗುರಿಗಳಿಗನುಗುಣವಾಗಿ ವ್ಯಾಖ್ಯೆಮಾಡುವದು ಅವಶ್ಯವೆನಿಸುವದು. ಆದರೆ ಈ ಭಾವನೆ ಬಹುಮಟ್ಟಿಗೆ ಕಾಲ್ಪನಿಕ. ಅಂತಿಮ ಗುರಿಯು ಯಾವುದೇ ಇದ್ದರೂ ಆರ್ಥಿಕ ಬೆಳವಣಿಗೆಗೆ ಅವಶ್ಯವಾದುದು. ವಿರಳವಾಗಿರುವ ಸರಕು ಸೇವೆಗಳ ಉತ್ಪಾದನೆಯನ್ನು ಹೆಚ್ಚಿಸುವದೆ ಆದುದರಿಂದ ಆರ್ಥಿಕ ಬೆಳವಣಿಗೆಯೆಂಬ ಪದವನ್ನು ಯಾವುದೇ ಒಂದು ದೇಶದ ಜನರು ತಮ್ಮ ದೇಶದಲ್ಲಿ ಸದ್ಯದಲ್ಲಿ ದೊರಕುತ್ತಿದ್ದ ಸಂಪನ್ಮೂಲ, ಕಾರ್ಮಿಕ ಶಕ್ತಿ, ಭಂಡವಲ ಹಾಗೂ ಸಂಘಟನಾ

ಶಕ್ತಿಗಳನ್ನುಪಯೋಗಿಸಿಕೊಂಡು ಸರಕು ಸೇವೆಗಳ ಉತ್ಪಾದನೆಯನ್ನು ಒಂದೇ ಸವನೆ ತೀವ್ರಗತಿಯಲ್ಲಿ ಹೆಚ್ಚಿಸುವ ಕ್ರಮವೆಂದು ಒಪ್ಪಿಕೊಳ್ಳಬೇಕು. ಶಬ್ದಾರ್ಥದಂತೆ ಈ ವ್ಯಾಖ್ಯೆಯು ಒಂದು ಸಮಾಜದ—ದೇಶದ—ಆರ್ಥಿಕ ವ್ಯವಸ್ಥೆಯನ್ನೆ ಒಂದು ಉತ್ಪಾದನೆಯ ಘಟಕವಾಗಿ ಮಾರ್ಪಡಿಸುವ ಕಾರ್ಯಕ್ರಮ. ಒಂದು ದೇಶದಲ್ಲಿಯ ಆರ್ಥಿಕ ಚಟುವಟಿಕೆಗಳ ಬಗೆಗಿನ ಅಂಕಿ ಸಂಖ್ಯೆಗಳನ್ನು ದೊರಕಿಸುವದು ಸುಲಭವಾದುದರಿಂದ, ಆರ್ಥಿಕ ಬೆಳವಣಿಗೆಯನ್ನು ಚರ್ಚಿಸುವಾಗ ಒಂದು ದೇಶದ ಸೀಮೆಗೆ ಪರಿಮಿತಗೊಳಿಸುವದು ಅನುಕೂಲಕರ. ಆರ್ಥಿಕ ಬೆಳವಣಿಗೆಯ ಮುಖ್ಯವಾದ ಗುಣಧರ್ಮಗಳನ್ನು ಅರಿಯಲು ಈ ವ್ಯಾಖ್ಯೆಯು ಸಹಾಯಕವಾಗಿದ್ದರೂ ಸಹ ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆಯನ್ನು ಅಳೆಯಲು ಒಂದು ದೇಶದ ದೇಶವಾಸಿಯ ತಲಾ ಆದಾಯವನ್ನು ಅಳತೆಗೋಲಾಗಿ ಉಪಯೋಗಿಸುವದು ವಾಡಿಕೆಯಲ್ಲಿದೆ. ಇತ್ತೀಚೆಗೆ ಸುಧಾರಿಸಲ್ಪಟ್ಟ ರಾಷ್ಟ್ರೀಯ ಉತ್ಪಾದನೆಯ (ಆದಾಯದ) ಅಂಕಿ ಸಂಖ್ಯೆಗಳನ್ನು ಲೆಕ್ಕಿಸುವ ಪದ್ಧತಿಯ ಸಹಾಯದಿಂದ ತಲಾ ಆದಾಯವನ್ನು ಅಚ್ಚುಕಟ್ಟಾಗಿ ಅಳೆಯಲು ಸಾಧ್ಯವಾಗಿದೆ. ಈ ಪದ್ಧತಿಯನ್ನು ಉಪಯೋಗಿಸಿ ಆದಾಯದ ಮೊತ್ತ ಹಾಗೂ ಒಳಗೊಂಡಿರಬಹುದಾದ ಸರಕು ಸೇವೆಗಳ ಬೆಲೆಯನ್ನು ಹಣಕಾಸಿನ ಮೌಲ್ಯದಲ್ಲಿ ಪ್ರಾದೇಶಿಕ ಇಲ್ಲವೆ ರಾಷ್ಟ್ರೀಯ ತಳಹದಿಯ ಮೇಲೆ ಲೆಕ್ಕಿಸಿ, ಸರಕು ಸೇವೆಗಳ ಬೆಲೆಗಳಲ್ಲಿ ಆಗಬಹುದಾದ ಏರುಪೇರುಗಳನ್ನು ಸರಿಪಡಿಸಿ ಈ ಅಂದಾಜುಗಳ ನಿಜವಾದ ಮೌಲ್ಯವನ್ನು ಗುರುತಿಸಬೇಕು.

ಮುಂದೆ ಇವುಗಳನ್ನು ಜನಸಂಖ್ಯೆಯಿಂದ ವಿಭಾಗಿಸಿದರೆ ತಲಾ ಆದಾಯದ ಸರಿಯಾದ ಕಲ್ಪನೆಯುಂಟಾಗುವದು.

ವಿವಿಧ ದೇಶಗಳ ಆರ್ಥಿಕ ಬೆಳವಣಿಗೆಯ ಮಟ್ಟವನ್ನು ನಿರ್ಧರಿಸಲು ೧೯೬೬ ರಲ್ಲಿ ಸಂಯುಕ್ತರಾಷ್ಟ್ರ ಸಂಸ್ಥೆಯ ಒಂದು ಸಲಹಾ ಮಂಡಳಿಯು ಜಗತ್ತಿನ ೮೫% ರಷ್ಟು ಜನಸಂಖ್ಯೆಯನ್ನು ಒಳಗೊಂಡ ೬೭ ರಾಷ್ಟ್ರಗಳ ಒಂದು ಸಮೀಕ್ಷೆಯನ್ನು ನಡೆಸಿತು. ಈ ಸಮೀಕ್ಷೆಯಲ್ಲಿ ಆಯಾ ದೇಶದ ಜನರ ತಲಾ ಆದಾಯವನ್ನು ಅಳತೆಗೋಲಾಗಿ ಉಪಯೋಗಿಸಿದೆ. ಈ ಸಮೀಕ್ಷೆಯಲ್ಲಿ ಒಟ್ಟು ದೇಶಗಳನ್ನು ಸ್ಥೂಲವಾಗಿ ಮೂರು ವರ್ಗಗಳಲ್ಲಿ ವಿಭಾಗಿಸಲಾಗಿದೆ. ಮೊದಲನೆಯ ಗುಂಪಿನಲ್ಲಿ ಅಮೇರಿಕೆ, ಸಂಯುಕ್ತ ಸಂಸ್ಥಾನ, ಪ. ಜರ್ಮನಿ, ಇಂಗ್ಲಂಡ ಮುಂತಾದ ಆರ್ಥಿಕ ಪರಿಪಕ್ವತೆ ಮುಟ್ಟಿದ ರಾಷ್ಟ್ರಗಳನ್ನು ಸೇರಿಸಲಾಗಿದೆ. ಇಂಥ ದೇಶದ ಜನರ ತಲಾ ಆದಾಯವು ವರ್ಷವೊಂದಕ್ಕೆ ೧೫೦೦ ಡಾಲರುಗಳಿಗಿಂತ (ರೂ. ೧೧,೨೫೦) ಹೆಚ್ಚಿಗೆ ಇರುವದು. ಎರಡನೆಯ ಗುಂಪಿನಲ್ಲಿ ಅರ್ಧ ಪಕ್ವ ರಾಷ್ಟ್ರಗಳು, ಅಂದರೆ ಆದೇಶಗಳ ಜನರ ತಲಾ ಆದಾಯವು ೫೦೦ ಡಾಲರನಿಂದ ( ರೂ. ೩೭೫೦ ) ೧೨೦೦ ಡಾಲರು (ರೂ. ೯೦೦೦) ಗಳ ಮಧ್ಯದಲ್ಲಿರುವಂಥದು. ಈ ಗುಂಪಿನಲ್ಲಿ ಜಪಾನ, ದ. ಆಫ್ರಿಕಾ, ಆಸ್ಟ್ರಿಯಾ, ಇಟಲಿ ಮುಂತಾದ ದೇಶಗಳು ಸೇರಿವೆ. ಮೂರನೆಯ ಗುಂಪಿನಲ್ಲಿ ೨೫೦ ಡಾಲರು (ರೂ. ೧,೮೭೫) ಅಥವಾ ಅದಕ್ಕಿಂತ ಕಡಿಮೆ ತಲಾ ಆದಾಯವಿರುವ ದೇಶಗಳನ್ನು ಸೇರಿಸಲಾಯಿತು. ಈ ಗುಂಪಿನಲ್ಲಿ ದ. ಅಮೇರಿಕೆಯ ದೇಶಗಳು, ಭಾರತ, ಬ್ರಹ್ಮದೇಶ, ಶ್ರೀಲಂಕಾ.

ಫಿಲಿಪೈನ್ಸ್ ಮುಂತಾದ ದೇಶಗಳು ಸೇರುವವು. ಈ ದೇಶಗಳನ್ನು ಅನಭಿವೃದ್ಧ ರಾಷ್ಟ್ರಗಳೆಂದು ಹೆಸರಿಸಲಾಯಿತು. ಆದ್ದರಿಂದ ಅನಭಿವೃದ್ಧರಾಷ್ಟ್ರಗಳೆಂದರೆ ಆರ್ಥಿಕ ಕಾರ್ಯಕ್ರಮಗಳ ಸ್ಥರವು ತೀರ ಕೆಳಮಟ್ಟದಲ್ಲಿರುವದರಿಂದ ಅತಿ ಕನಿಷ್ಠ ನಿಕ್ಕೀ ತಲಾ ಆದಾಯವಿರುವ ದೇಶಗಳೆಂದು ವ್ಯಾಖ್ಯೆ ಮಾಡಲ್ಪಟ್ಟಿತು. ಸಮೀಕ್ಷೆ ನಡೆದ ಸಮಯದಲ್ಲಿ ಭಾರತದ ಜನತೆಯ ತಲಾ ಆದಾಯವು ಕೇವಲ ೯೦ ಡಾಲರುಗಳಷ್ಟು ಅಂದರೆ ರೂ. ೩೪೫ ರಷ್ಟು ಇದ್ದಿತೆಂಬುದು ತೀರ ಖೇದಕರ ವಿಷಯ. ಆರ್ಥಿಕ ಬೆಳವಣಿಗೆಯ ಅಂತಿಮ ಉದ್ದೇಶವು ಜನತೆಯ ಜೀವನ ಮಟ್ಟವನ್ನು ಸುಧಾರಿಸಿ ಉಪಭೋಗ್ಯತೆಯ ದರ್ಜೆಯನ್ನು ಹೆಚ್ಚಿಸುವದೇ ಇರುವದೆಂಬುದು ನಿರ್ವಿವಾದ.

## ೩. ಭಾರತದಲ್ಲಿ ಆರ್ಥಿಕ ಬೆಳವಣಿಗೆಯ ಪ್ರಯತ್ನ

ನಮ್ಮ ದೇಶದಲ್ಲಿ ಯೋಜನೆಯ ತಂತ್ರವನ್ನು ಉಪಯೋಗಿಸಿ ಆರ್ಥಿಕ ಬೆಳವಣಿಗೆಯ ಗುರಿಯನ್ನು ಸಾಧಿಸುವ ಪ್ರಯತ್ನವನ್ನು ಸ್ವಾತಂತ್ರ್ಯಾನಂತರ ೧೯೫೦ ರಲ್ಲಿ ಪ್ರಾರಂಭಿಸಲಾಯಿತು. ಆದರೆ ಯೋಜನೆಯ ತಂತ್ರವನ್ನು ಬಳಸಿ ಆರ್ಥಿಕ ಅಭಿವೃದ್ಧಿಯನ್ನು ತೀವ್ರವಾಗಿ ಸಾಧಿಸಬಹುದು ಎಂಬ ವಿಚಾರವನ್ನು ಭಾರತದಲ್ಲಿ ಮೊಟ್ಟಮೊದಲು ಪ್ರಚೋದಿಸಿದವರು ಸರ್ M. ವಿಶ್ವೇಶ್ವರಯ್ಯನವರು. ಇವರು ೧೯೩೪ ರಲ್ಲಿ ತಾವು ಬರೆದ

Planned Economy for India ಎಂಬ ಪುಸ್ತಕದಲ್ಲಿ ಆರ್ಥಿಕ ಪ್ರಗತಿಯನ್ನು ತ್ವರಿತ ಗತಿಯಲ್ಲಿ ಸಾಧಿಸಬಹುದಾದ ಯೋಜನೆಯೊಂದನ್ನು ರಚಿಸಲು ಪ್ರಯತ್ನಿಸಿದರು. ಇದಾದ ಮೇಲೆ ಮೂರೇ ವರ್ಷಗಳ ನಂತರ ಪಂಡಿತ ನೆಹರೂರವರು ಅಖಿಲಭಾರತ ಕಾಂಗ್ರೆಸ್ಸಿನ ವತಿಯಿಂದ ರಾಷ್ಟ್ರೀಯ ಯೋಜನಾ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ರಚಿಸಿಕೊಂಡರು. ನಂತರ ಮುಂಬಯಿಯ ಕೆಲವು ಉದ್ದಿಮೆದಾರರು "ಮುಂಬೈ ಯೋಜನೆ" ಹಾಗೂ M. N. ರಾಯರು "ಜನತಾ ಯೋಜನೆ"ಗಳನ್ನು ರಚಿಸಿದರು. ಆದರೆ ಈ ಎಲ್ಲ ಪ್ರಯತ್ನಗಳು ಕೇವಲ ಯೋಜನೆಯ ನೀತಿಯನ್ನು ಪುರಸ್ಕರಿಸುವ ಪ್ರಯತ್ನಗಳಾಗಿದ್ದು ಇವುಗಳಿಗೆ ಬ್ರಿಟಿಶ ಆಡಳಿತದ ಪ್ರೋತ್ಸಾಹವಾಗಲಿ, ಸಹಕಾರವಾಗಲಿ ದೊರೆಯಲಿಲ್ಲ.

ಸ್ವಾತಂತ್ರ್ಯಾನಂತರ ದೇಶದಲ್ಲಿ ಆರ್ಥಿಕ ಬೆಳವಣಿಗೆಯ ಅಸ್ತಿಭಾರವನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದ ೧೯೫೧ ಎಪ್ರಿಲ್, ೧ರಂದು ಹಾಕಲಾಯಿತು. ಯೋಜನೆಯ ತಂತ್ರದಿಂದ ಆರ್ಥಿಕ ಬೆಳವಣಿಗೆಯ ಗುರಿಯನ್ನು ತ್ವರಿತವಾಗಿ ಸಾಧಿಸುವ ಪದ್ಧತಿಯನ್ನು ಮೊದಲು ಸೋವಿಯತ್ ರಶಿಯದಲ್ಲಿ ೧೯೨೮ರಲ್ಲಿ ಪ್ರಾರಂಭಿಸಲಾಯಿತು. ಆದರೆ ಆ ಯೋಜನೆಯ ತಂತ್ರವು ಕಮ್ಯುನಿಷ್ಟ ಸರ್ವಾಧಿಕಾರದ ರಾಜಕೀಯಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟಿದ್ದು ಪ್ರಜಾಪ್ರಭುತ್ವ ಪದ್ಧತಿಯ ರಾಜಕೀಯ ಸಂವಿಧಾನವನ್ನು ಅನುಸರಿಸುವ ದೇಶದಲ್ಲಿ ಯೋಜನೆಯ ತಂತ್ರವನ್ನು ಅನುಸರಿಸಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ

ಪ್ರಯೋಗವು ಪ್ರಥಮವಾಗಿ ಭಾರತದಲ್ಲಿಯೇ ಪ್ರಾರಂಭ ವಾಯಿತು. ಯೋಜನೆಯ ತಂತ್ರದಲ್ಲಿ ಆರ್ಥಿಕ ಬೆಳವಣಿಗೆಯ ಮುಖ್ಯ ಜವಾಬ್ದಾರಿಯನ್ನು ಸರಕಾರವೇ ವಹಿಸಬೇಕಾಗುವದು. ಆದುದರಿಂದ ಆರ್ಥಿಕ ರಂಗದಲ್ಲಿ ಈಗಾಗಲೇ ಇರುವ ಖಾಸಗಿ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಪೂರ್ಣ ಸ್ವಾತಂತ್ರ್ಯ ತತ್ತ್ವವನ್ನು ಪುರಸ್ಕರಿಸುವದಿಲ್ಲ. ಅವರೆಲ್ಲ ಯೋಜನೆಯ ಗುರಿಗಳಿಗನುಗುಣ ವಾಗಿ ತಮ್ಮ ಕಾರ್ಯಕ್ರಮಗಳನ್ನು ಹೊಂದಿಸಿಕೊಳ್ಳಬೇಕಾಗು ವದು. ಹಾಗೂ ಅನೇಕ ತರದ ನಿಯಂತ್ರಣಗಳಿಗೆ ಒಪ್ಪಿಕೊಳ್ಳ ಬೇಕಾಗುವದು. ಇಂಥ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಯ ಯೋಜನೆಗಳು ಪರಸ್ಪರ ಹೊಂದಾಣಿಕೆಯೊಡನೆ ನಡೆಯುವ ಸಾಧ್ಯತೆಯನ್ನು ಕುರಿತು ಅನೇಕ ಗಣ್ಯ ವಿಚಾರವಂತರು ತಮ್ಮ ಸಂಶಯವನ್ನು ವ್ಯಕ್ತಪಡಿಸಿದ್ದರು. ಆದರೆ ಈ ಪ್ರಯೋಗದ ಯಶಸ್ಸಿಗಾಗಿ ಪಂಡಿತ ನೆಹರೂರವರು ತಮ್ಮ ಆಡಳಿತದುದ್ದಕ್ಕೂ ಪ್ರಯತ್ನಿಸಿ ಕೆಲಮಟ್ಟಿಗೆ ಯಶಸ್ಸು ಗಳಿಸಿದರು ಎಂಬುದರಲ್ಲಿ ಸಂಶಯವಿಲ್ಲ.

ಮಾರ್ಚ ೧೯೫೦ ರಲ್ಲಿ ಯೋಜನೆಯ ತಂತ್ರಕ್ಕನುಗುಣ ವಾಗಿ ನಮ್ಮ ದೇಶದಲ್ಲಿ ಒಂದು ಯೋಜನಾ ಆಯೋಗವು ರಚಿಸಲ್ಪಟ್ಟಿತು. ಭಾರತದ ಅಂದಿನ ಪ್ರಧಾನಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂರವರು ಅಧ್ಯಕ್ಷರಾದರು ಹಾಗೂ ಶ್ರೀ V. T. ಕೃಷ್ಣಮಾಚಾರಿ ಎಂಬ ನುರಿತ ಆಡಳಿತ ಗಾರರನ್ನು ಉಪಾಧ್ಯಕ್ಷರನ್ನಾಗಿ ನಿಯಮಿಸಲಾಯಿತು. ಉಳಿದ ಸದಸ್ಯರಲ್ಲಿ ಕೆಲವರು ಅರ್ಥಶಾಸ್ತ್ರ ಪರಿಣತರು, ಸಂಖ್ಯಾ

ಶಾಸ್ತ್ರ ಪರಿಣತರು ಹಾಗೂ ಆಡಳಿತ ತಂತ್ರ ಪರಿಣತರೂ ಇದ್ದರು ಈ ಯೋಜನಾ ಆಯೋಗವು ದೇಶದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಬಂಡವಲದ ಅನುಕೂಲತೆಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಐದು ವರ್ಷಗಳಲ್ಲಿ ಎಷ್ಟರಮಟ್ಟಿನ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬಹುದು ಎಂದು ನಿರ್ಣಯಿಸಿತು. ಆರ್ಥಿಕ ಬೆಳವಣಿಗೆಯ ವೇಗವು ಜನಸಂಖ್ಯಾ ಬೆಳವಣಿಗೆಯ ವೇಗಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರಬೇಕು. ಅಂದಾಗಲೇ ಆರ್ಥಿಕ ಬೆಳವಣಿಗೆಯ ಪರಿಣಾಮವನ್ನು ನಾವು ಅನುಭವಿಸಬಲ್ಲೆವು.

ಮೊದಲನೆಯ ಪಂಚವಾರ್ಷಿಕ ಯೋಜನೆಯು ೧೯೫೧ ಎಪ್ರಿಲ್. ೧ ರಂದು ಪ್ರಾರಂಭಿಸಲ್ಪಟ್ಟಿತು. ಒಟ್ಟು ರೂ. ೨೦೬೯ ಕೋಟಿ ಹಣವನ್ನು ಬಂಡವಲವಾಗಿ ವಿನಿಯೋಗಿಸಿ ವರ್ಷಕ್ಕೆ ೫% ರಷ್ಟು ದರದ ರಾಷ್ಟ್ರೀಯ ಆದಾಯದ (ವರಮಾನ) ಬೆಳವಣಿಗೆಯನ್ನು ಸಾಧಿಸಲು ನಿರ್ಣಯಿಸಿತು. ಈ ಯೋಜನೆಯು ಬಹುಮಟ್ಟಿಗೆ ತನ್ನ ಗುರಿಯನ್ನು ಸಾಧಿಸುವಲ್ಲಿ ಯಶಸ್ಸು ಪಡೆಯಿತು. ಈ ಸಾಧನೆಯಿಂದ ಹುರುಪುಗೊಂಡ ಯೋಜನಾ ಆಯೋಗವು ೧೯೫೬ ರಲ್ಲಿ ಪ್ರೊ॥ ಮಹಾಲನೋಬಿಸ್ ಎಂಬ ಸಂಖ್ಯಾಶಾಸ್ತ್ರ ತಜ್ಞರ ಮಾರ್ಗದರ್ಶನದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಜಾರಿಯಲ್ಲಿ ತಂದಿತು. ಮೊದಲನೆಯ ಪಂಚವಾರ್ಷಿಕ ಯೋಜನೆಯು ರಾಜಕೀಯ ಆದರ್ಶಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡಿರಲಿಲ್ಲ. ಎರಡನೆಯ ಯೋಜನೆಯು "ಸಮಾಜವಾದಿ ಪದ್ಧತಿಯ ಸಮಾಜ ರಚನೆಯನ್ನು ತನ್ನ ಗುರಿಯಾಗಿಟ್ಟುಕೊಂಡಿತು. ಇದಕ್ಕನುಗುಣವಾಗಿ ದೇಶದಲ್ಲಿ ಔದ್ಯೋ

ಗಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಸರಕಾರದ ಕೈ ಮೇಲಾಗಬೇಕೆಂಬ ಆಕಾಂಕ್ಷೆಯನ್ನು ಹೊಂದಿತು, ದೇಶದ ಕೃಷಿ ರಂಗವು ಬಹುತೇಕವಾಗಿ ಖಾಸಗಿ ರಂಗವಲ್ಲಿದ್ದುದರಿಂದ. ಈ ಉದ್ದೇಶ ಸಾಧನೆಗೆ ದೇಶದಲ್ಲಿ ಔದ್ಯಮೀಕರಣದ ತಳಪಾಯ ರಚನೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸರಕಾರವೇ ವಹಿಸಿಕೊಂಡಿತು. ಆದುದರಿಂದ ಔದ್ಯಮಿಕ ಸಂಪನ್ಮೂಲಗಳನ್ನು ಒದಗಿಸುವ ಉಕ್ಕು ಮತ್ತು ಕಬ್ಬಿಣ, ಯಂತ್ರೋಪಕರಣಗಳು ಕಲ್ಲಿದ್ದಲಿ, ಪೆಟ್ರೋಲಿಯಮ್ ಹಾಗೂ ವಿದ್ಯುತ್‌ಶಕ್ತಿ ಮುಂತಾದವುಗಳ ಉತ್ಪಾದನೆಯ ರಂಗದಲ್ಲಿ, ಅದರಂತೆ ಸಾರಿಗೆ ಸಂಪರ್ಕ ವ್ಯವಸ್ಥೆಯ ಉದ್ದಿಮೆಗಳಲ್ಲಿ ಸರಕಾರದ ಏಕ ಸ್ವಾಮಿತ್ವವನ್ನೇ ಸ್ಥಾಪಿಸಲಾಯಿತೆಂದರೆ ಅತಿಶಯೋಕ್ತಿಯಲ್ಲ. ಈ ಎಲ್ಲ ಉದ್ದಿಮೆಗಳ ಬೆಳವಣಿಗೆಗೆ ಬೇಕಾಗುವ ಬಂಡವಲವನ್ನು ಒಂದುಗೂಡಿಸಲು ದೇಶದಲ್ಲಿ ಸಂಚಯಿಸಬಹುದಾದ ಬಂಡವಲಕ್ಕಿಂತ ಹೆಚ್ಚಾಗಿ ವಿದೇಶಿ ಸಾಲ ಹಾಗೂ ಕೊರತೆಯ ಹಣಕಾಸಿನ ನೀತಿ ಇವುಗಳ ಮೇಲೆ ಅವಲಂಬಿಸಲಾಯಿತು. ರೂ. ೪೮೦೦ ಕೋಟಿ ಬಂಡವಲವನ್ನು ಐದು ವರ್ಷಗಳಲ್ಲಿ ವಿನಿಯೋಗಿಸಿ ನಿರ್ದಿಷ್ಟ ಗುರಿಗಳನ್ನು ತಲುಪಲು ಬಯಸಿದ ಈ ಯೋಜನೆಯು ಪ್ರಾರಂಭವಾದ ಎರಡೇ ವರ್ಷಗಳಲ್ಲಿ ( ೧೯೫೮ ರಲ್ಲಿ ) ವಿದೇಶಿ ವಿನಿಮಯದ ಅಭಾವದ ಕುತ್ತನ್ನೂ ಸ್ವದೇಶದಲ್ಲಿ ಅತಿಪ್ರಸರಣ ಹಾಗೂ ನೈಸರ್ಗಿಕ ಬವಣೆಗಳ ಪರಿಣಾಮವಾಗಿ ಬೆಲೆಯೇರಿಕೆಯ ಪರಿಸ್ಥಿತಿಯನ್ನೂ ಎದುರಿಸಬೇಕಾಯಿತು. ಇದರಿಂದ ಬಂಡವಲ ವಿನಿಯೋಗದಲ್ಲಿ ಕಡಿತ ಮಾಡುವ ಸಂದರ್ಭವೊದಗಿತು. ಇದಕ್ಕನುಗುಣವಾಗಿ ೧೯೬೧

ರಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯು ಪೂರ್ತಿಗೊಂಡಾಗ ಸರಕಾರವು ರೂ. ೪೬೦೦ ಕೋಟಿ ಬಂಡವಲವನ್ನು ವಿನಿಯೋಗಿಸಲು ಮಾತ್ರ ಸಮರ್ಥವಾಯಿತು. ಇದರಲ್ಲಿಯೂ ಕೂಡ ವಿದೇಶಿ ಸಾಲದ ಮೊತ್ತ ರೂ. ೨೫೫೨.೧ ಕೋಟಿ ಹಾಗೂ ಕೊರತೆಯ ಹಣಕಾಸಿನ ಮೊತ್ತ ರೂ. ೯೫೪ ಕೋಟಿ ಇದ್ದಿತು. ತತ್ಪರಿಣಾಮವಾಗಿ ಮುಂದಿನ ವರ್ಷಗಳಲ್ಲಿ ವಿದೇಶಿ ಸಾಲದ ಭಾರವು ಹೆಚ್ಚಾದುದಲ್ಲದೆ ಕೊರತೆಯ ಹಣಕಾಸಿನ ನೀತಿಯಿಂದುಂಟಾದ ಅತಿ ಪ್ರಸರಣದ ಪಿಡುಗು ದೇಶದ ಆರ್ಥಿಕ ರಂಗದಲ್ಲಿ ಮನೆಮಾಡಿತು. ಎರಡನೆಯ ಯೋಜನೆಯು ಮುಗಿಯುವ ವೇಳೆಗೆ ದೇಶದಲ್ಲಿ ಬೆಲೆಗಳ ಸೂಚ್ಯಂಕದಲ್ಲಿ ೩೮.೫% ರಷ್ಟು ವೃದ್ಧಿಯಾಯಿತು. ಆದರೆ ಯೋಜನೆಯ ಮೊದಲಿನ ಒಂದು ದಶಕದಲ್ಲಿ ರಾಷ್ಟ್ರೀಯ ವರಮಾನದಲ್ಲಿ ೪೨% ರಂತೆಯೂ, ತಲಾ ಆದಾಯದಲ್ಲಿ ೧೬% ರಂತೆಯೂ ವೃದ್ಧಿಯನ್ನು ಸಾಧಿಸಲಾಯಿತು. ಇದು ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣದಲ್ಲಿ ಆರ್ಥಿಕ ಬೆಳವಣಿಗೆಯ ವೇಗವನ್ನು ಗಳಿಸಿಕೊಳ್ಳಲು ಅಸಮರ್ಥವಾದುದನ್ನು ಎತ್ತಿತೋರಿಸುವದು. ಮುಖ್ಯವಾಗಿ ಜನರ ತಲಾ ಆದಾಯದಲ್ಲಿ ವೃದ್ಧಿಯ ವೇಗವು ಕಡಿಮೆಯಾಗಲು, ಜನಸಂಖ್ಯೆಯ ವೃದ್ಧಿ ಯೋಜನೆಯಲ್ಲಿ ನಂಬಿಕೊಂಡಂತೆ ೧.೬% ವೇಗಕ್ಕಿಂತ ಹೆಚ್ಚಿಗೆ ಅಂದರೆ ೨.೪% ವೇಗದಲ್ಲಿ ಅಧಿಕಗೊಳ್ಳುತ್ತಿದ್ದುದು ಒಂದು ಮುಖ್ಯ ಕಾರಣವಾಗಿದೆ. ಎರಡನೆಯ ಯೋಜನೆಯು ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿದರೂ ಕೂಡ ಮಿತ್ರದೇಶಗಳ ಹಾಗೂ ಜಾಗತಿಕ

ಬ್ಯಾಂಕಿನ ಸಹಾಯದಿಂದ ದೇಶದಲ್ಲಿ ಔದ್ಯೋಗೀಕರಣದ ಅಸ್ತಿವಾರವನ್ನು ನಿರ್ಮಿಸುವದರಲ್ಲಿ ಯಶಸ್ಸು ಪಡೆಯಿತು.

ಮೂರನೆಯ ಪಂಚವಾರ್ಷಿಕ ಯೋಜನೆಯು ೧೯೬೧ ರಲ್ಲಿ ಪ್ರಾರಂಭವಾಯಿತು. ಮೊದಲಿನ ಎರಡು ಯೋಜನೆಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ಪರಿಹರಿಸುವ ಪ್ರಯತ್ನವು ಈ ಯೋಜನೆಯಲ್ಲಿತ್ತು. ಮೂರನೆಯ ಯೋಜನೆಯು ಮುಗಿಯುವ ವೇಳೆಗೆ ದೇಶದ ಆರ್ಥಿಕ ಬೆಳವಣಿಗೆಯು ಸ್ವಂತ ಸಾಮರ್ಥ್ಯದ ಮೇಲೆಯೇ ಬೆಳವಣಿಗೆಯನ್ನು ಸಾಧಿಸುವಷ್ಟು ಪ್ರಬುದ್ಧತೆಗೆ ನಿಲುಕುವದೆಂಬ ಆಕಾಂಕ್ಷೆಯನ್ನು ಪ್ರದರ್ಶಿಸಲಾಗಿತ್ತು. ರೂ. ೭೫೦೦ ಕೋಟಿಯಷ್ಟು ಭಂಡವಲವನ್ನು ಐದು ವರ್ಷಗಳಲ್ಲಿ ವಿನಿಯೋಗಿಸುವ ಗುರಿಯನ್ನು ಹೊಂದಿದ ಈ ಯೋಜನೆಯು ಮತ್ತೆ ಕೊರತೆಯ ಹಣಕಾಸು ಹಾಗೂ ವಿದೇಶಿ ಸಹಾಯಗಳ ಮೇಲೆಯೇ ಅವಲಂಬಿಸುವ ಪರಿಸ್ಥಿತಿಯುಂಟಾಯಿತು. ಆದರೆ ಈ ಯೋಜನೆಯ ಪ್ರಗತಿಗೆ ಗಂಡಾಂತರ ತರುವಂಥ ೧೯೬೨ ರ ಚೀನಾದ ಆಕ್ರಮಣ ಹಾಗೂ ೧೯೬೫ ರಲ್ಲಿಯ ಪಾಕಿಸ್ತಾನದೊಡನೆ ನಡೆದ ಯುದ್ಧ ಈ ಅನಿವಾರ್ಯ ಪ್ರಸಂಗಳಿಂದ ಮತ್ತು ದೇಶದಲ್ಲಿಯ ನಿಸರ್ಗದ ಪ್ರಕೋಪದಿಂದುಂಟಾದ ಬರಗಾಲದ ಪರಿಸ್ಥಿತಿಯಿಂದ ಯೋಜನೆಯ ತಂತ್ರದ ಉಪಯುಕ್ತತೆ ಕುಂಠಿತಗೊಂಡಿತು. ಆರ್ಥಿಕ ಬೆಳವಣಿಗೆಯ ಗತಿಯು ೫% ರಷ್ಟು ಪ್ರಮಾಣದಲ್ಲಿ ಸಾಗಲಿಲ್ಲ. ಜನತೆಯ ತಲಾ ಆದಾಯವು ರೂ. ೩೩೫ ಕ್ಕೆ ಸ್ಥಿರಗೊಂಡಿತು. ಅತಿ ಪ್ರಸರಣ ಹಾಗೂ ವಿದೇಶಿ ವಿನಿಮಯದ ಕೊರತೆಗಳಿಂದ ಬೆಲೆಯೇರಿಕೆ ಹಾಗೂ ಉದ್ದಿಮೆಗಳ ಪ್ರಗತಿಯಲ್ಲಿ ಅಡಚಣಿ

ಯುಂಟಾಗಿ ತೀವ್ರ ಆರ್ಥಿಕ ಮುಗ್ಗಟ್ಟು, ನಿರುದ್ಯೋಗ ಸಮಸ್ಯೆ. ಆವಶ್ಯಕ ಸರಕುಗಳ ಅಭಾವ ಮುಂತಾದ ತೀವ್ರ ಪರಿಸ್ಥಿತಿಗಳನ್ನು ದೇಶವು ೧೯೬೬ ರಲ್ಲಿ ಎದುರಿಸಬೇಕಾಯಿತು. ಇದರಿಂದ ಪಂಚವಾರ್ಷಿಕ ಯೋಜನೆಯ ತಂತ್ರವನ್ನೇ ಕೆಲವರ್ಷಗಳ ವರೆಗೆ ತಡೆದು ನಿಲ್ಲಿಸುವ ಪ್ರಸಂಗವು ಒದಗಿ ಬಂದಿತು. ರಾಷ್ಟ್ರೀಯ ವರಮಾನದ ವೃದ್ಧಿಯಿಲ್ಲದೆ ಮುಂದಿನ ಯೋಜನೆಗೆ ಬಂಡವಲವನ್ನು ಒಂದುಗೂಡಿಸುವ ಪ್ರಯತ್ನ ವಿಫಲವಾಯಿತು. ಅಲ್ಲದೆ ಯುದ್ಧಗಳ ಪರಿಣಾಮವಾಗಿ ವಿದೇಶಿ ವಿನಿಮಯದ ಕೊರತೆ ತೀವ್ರಗೊಂಡಿತು. ಪರದೇಶಗಳಿಂದ ಪಡೆಯಬಹುದಾದ ಸಾಲದ ಮೊತ್ತವೂ ನಮ್ಮ ಆರ್ಥಿಕ ದುಃಸ್ಥಿತಿಯ ಪರಿಣಾಮದಿಂದ ಮುಂದೆ ಬರದಾಯಿತು. ಹೀಗಾಗಿ ೧೯೬೬ ರಲ್ಲಿ ನಾಲ್ಕನೆಯ ಯೋಜನೆಯನ್ನು ಪ್ರಾರಂಭಿಸದೆ ೧೯೬೬-೬೭. ೧೯೬೭-೬೮ ಹಾಗೂ ೧೯೬೮-೬೯ ರ ವರೆಗೆ ಮೂರು ಸಾಮ್ವತ್ಸರದ ವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲು ನಿರ್ಧರಿಸಿ ದೇಶದಲ್ಲಿ ಮಹತ್ವದ ಭಾಗವಾದ ಕೃಷಿರಂಗಕ್ಕೆ ಸಾಕಷ್ಟು ಲಕ್ಷ್ಯವನ್ನು ಮೂರು ಯೋಜನೆಗಳು ಪೂರೈಸಲು ಅಸಮರ್ಥವಾದುದೇ ಇಂಥ ಮುಗ್ಗಟ್ಟಿಗೆ ಕಾರಣವಾದುದನ್ನು ಅನುಲಕ್ಷಿಸಿ ವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೃಷಿ ಅಭಿವೃದ್ಧಿಗೆ ಪ್ರಥಮ ಪ್ರಾಶಸ್ತ್ಯ ನೀಡಿ ವಿಜ್ಞಾನದ ಪೂರ್ಣ ಉಪಯೋಗ ತೆಗೆದುಕೊಳ್ಳಲು ನಿರ್ಧರಿಸಲಾಯಿತು. ಈ ಎಲ್ಲ ಪ್ರಯತ್ನಗಳ ಫಲವಾಗಿ ೧೯೬೬ ರಲ್ಲಿ ಕೇವಲ ೭೨ ದಶಲಕ್ಷ ಟನ್‌ದಷ್ಟಿದ್ದ ಆಹಾರಧಾನ್ಯಗಳ ಉತ್ಪಾದನೆಯು ೧೯೬೮ ರಷ್ಟರಲ್ಲಿ ೯೫ ದಶಲಕ್ಷ ಟನ್ ಏರಿತು.

ಆದರೆ ವಾರ್ಷಿಕ ಯೋಜನೆಗಳ ಸಮಯದಲ್ಲಿ ಔದ್ಯಮಿಕ ರಂಗದಲ್ಲಿ ಬಂಡವಲ ವಿನಿಯೋಗವು ಕಡಿತವನ್ನನುಭವಿಸಿದುದರಿಂದ ಹಾಗೂ ಖಾಸಗಿ ಉದ್ದಿಮೆಗಳೂ ಸಹ ಬೆಲೆಯೇರಿಕೆಯ ಪರಿಸ್ಥಿತಿಯಿಂದನುಭವಿಸಿದ "ಹಿನ್ನಡೆ"ಯಿಂದ (Recession) ದೇಶದಲ್ಲಿ ನಿರುದ್ಯೋಗ ಸಮಸ್ಯೆಯು ತೀವ್ರಗೊಂಡು ಯುವಜನಾಂಗದಲ್ಲಿ ಅಶಾಂತಿಯ ವಾತಾವರಣವನ್ನುಂಟುಮಾಡಿತು. ದೇಶವಲ್ಲಿಯ ಬಂಡವಲ ನಿರ್ಮಾಣದ ವೇಗವು ಅತಿ ಪ್ರಸರಣದ ಪರಿಣಾಮವಾಗಿ ೧೧% ಕ್ಕಿಂತ ಹೆಚ್ಚಾಗದಿದ್ದುದರಿಂದ ಸ್ವಯಂಪೂರ್ಣತೆಯನ್ನು ಹೊಂದುವ ಗುರಿಯು ಸಾಧಿಸಲ್ಪಡಲಿಲ್ಲ.

೧೯೬೯ರಲ್ಲಿ ಸರಕಾರವು ಬಹು ಪ್ರಯಾಸದಿಂದ ಯೋಜನಾಯುಗವನ್ನು ಪುನಃ ಪ್ರಾರಂಭಿಸುವ ಉದ್ದೇಶದಿಂದ ರೂಪಾಯಿ ೧೬೦೦೦ ಕೋಟಿ ಬಂಡವಲವನ್ನೊಳಗೊಂಡ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಿತು. ಆದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಗತಿಯು ಅತಿಪ್ರಸರಣದಿಂದುಂಟಾದ ತೀವ್ರ ಬೆಲೆಯೇರಿಕೆಯ ಪರಿಸ್ಥಿತಿ ಔದ್ಯಮಿಕ ರಂಗದಲ್ಲಿ ವಿದೇಶ ವಿನಿಮಯದ ಕೊರತೆ, ವಿದೇಶಿ ಸಾಲಗಳನ್ನು ಹಿಂತಿರುಗಿಸುವ ಜವಾಬ್ದಾರಿ ಹಾಗೂ ಹೊಸ ವಿದೇಶಿ ಸಾಲಗಳು ಸಿಗುವ ಅವಕಾಶ ಕಡಿಮೆಯಾದುದು ಮತ್ತು ೧೯೭೧ ರಲ್ಲಿ ಬಂಗ್ಲಾದೇಶದ ವಿಮೋಚನಾ ಚಳುವಳಿಯ ಪರಿಣಾಮಗಳಿಂದ ಸತತವಾಗಿ ಕುಂಠಿತಗೊಂಡು, ಯೋಜನೆಯ ಕೊನೆಯ ವರ್ಷಲ್ಲಿ ಆರ್ಥಿಕ ಬೆಳವಣಿಗೆಯ ವೇಗವು ಕೇವಲ ೦.೨% ರಷ್ಟಕ್ಕೆ ಇಳಿಯಿತು. ಅನೇಕ ವರ್ಷಗಳಿಂದಲೂ ಆರ್ಥಿಕ

ಬೆಳವಣಿಗೆಯು ವೇಗವು ಯೋಜನಾ ಆಯೋಗವು ನಿರ್ಧರಿಸಿದ ವೇಗದಲ್ಲಿ ಸಾಗದಿದ್ದುದರಿಂದ ಅನೇಕ ಉತ್ಪಾದನಾರಂಗಗಳಲ್ಲಿ ಭಂಡವಲ ವಿನಿಯೋಗಕ್ಕನುಗುಣವಾಗಿ ಪ್ರಗತಿಯಾಗದೇ ಅತಿ ಪ್ರಸರಣ ಹಾಗೂ ಅಭಾವ ಪರಿಸ್ಥಿತಿಯು ತಾಂಡವವಾಡುತ್ತಿರುವಂಥ ಸಂದರ್ಭ ಒದಗಿದೆ. ಈ ಅಭಾವ ಪರಿಸ್ಥಿತಿಗಳ ದುರುಪಯೋಗ ಪಡೆಯುವ ದುಷ್ಟ ಶಕ್ತಿಗಳು ಸಮಾಜದಲ್ಲಿ ಪ್ರಬಲಗೊಂಡು, ಸಾರ್ವಜನಿಕ ಜೀವನದಲ್ಲಿಯ ನೆಮ್ಮದಿಯನ್ನು ನಾಶಗೊಳಿಸಿರುವವು.

## ೪. ಗುಣದೋಷಗಳು

ಇಲ್ಲಿಯವರೆಗೆ ನಮ್ಮ ಆರ್ಥಿಕ ಬೆಳವಣಿಗೆಯು ನಡೆದು ಬಂದ ದಾರಿಯನ್ನು ವಿವರಿಸಲಾಯಿತು. ಇನ್ನು ಕೆಲವು ಗುಣದೋಷಗಳ ಕಡೆಗೆ ಗಮನ ಹರಿಸೋಣ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ಪರಿಸ್ಥಿತಿಯೊಡನೆ ನಾವು ಪ್ರಸ್ತುತ ಪರಿಸ್ಥಿತಿಯನ್ನು ಹೋಲಿಸಿ ನೋಡಿದರೆ ಕೆಲವು ಅಭೂತಪೂರ್ವ ಆರ್ಥಿಕ ಬದಲಾವಣೆಗಳನ್ನು ಕಾಣದಿರಲಾರೆವು. ೧೯೪೯ರಲ್ಲಿ ಸಂಯುಕ್ತರಾಷ್ಟ್ರ ಸಂಸ್ಥೆಯು ವಿವಿಧ ದೇಶಗಳ ವಾರ್ಷಿಕ ಆದಾಯ ಹಾಗು ತಲಾ ಆದಾಯಗಳ ಅಂಕೆಸಂಖ್ಯೆಗಳನ್ನು ಕಲೆಹಾಕಿದಾಗ ಭಾರತದ ಜನತೆಯ ತಲಾ ಆದಾಯವು ಕೇವಲ $ ೫೭ (ರೂ. ೨೭೧) ರಷ್ಟಿದ್ದು ಅತಿ ಬಡತನದ ರಾಷ್ಟ್ರವೆಂದು ಪರಿ

ಗಣಿಸಲ್ಪಟ್ಟಿತ್ತು. ಭಾರತದ ಉಳಿತಾಯದ ಪ್ರಮಾಣವು ರಾಷ್ಟ್ರೀಯ ಆದಾಯದ ೫% ಕ್ಕಿಂತ ಹೆಚ್ಚಿಗೆಯಿರಲಿಲ್ಲ. ಬಂಡವಲ ಹಾಗೂ ಉತ್ಪಾದನೆಯ ಪ್ರಮಾಣವು ೩:೧ ರ ಪ್ರಮಾಣದಲ್ಲಿದ್ದು ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣವು ೧.೨೫% ಇದ್ದುದರಿಂದ ದೇಶದ ಆರ್ಥಿಕ ರಂಗವು ಹಿಂದುಳಿಯುವಿಕೆಯ ವಿಷಮ ವರ್ತುಲದಲ್ಲಿ ಸಿಲುಕಿಕೊಂಡಿತ್ತು.

ಮೊದಲನೆಯ ಪಂಚವಾರ್ಷಿಕ ಯೋಜನೆಯು ತನ್ನ ಮಿತವಾದ ಆಕಾಂಕ್ಷೆಯನ್ನು ಹೊಂದಿದ ಗುರಿಗಳನ್ನು ಮುಂದಿರಿಸಿಕೊಂಡಿದ್ದುದರಿಂದ ಬಹುಮಟ್ಟಿಗೆ ಯಶಸ್ವಿಯಾಯಿತು ಹಾಗೂ ಜನರಲ್ಲಿ ತೀವ್ರ ಆಕಾಂಕ್ಷೆಗಳನ್ನು ಪ್ರಚೋದಿಸಿತು. ಈ ಯೋಜನೆಯ ಕಾಲದಲ್ಲಿ ಆಹಾರಧಾನ್ಯದ ಉತ್ಪಾದನೆಯು ೧೦% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವೃದ್ಧಿಗೊಂಡಿತು ಹಾಗೂ ರಾಷ್ಟ್ರೀಯ ಆದಾಯವು ೧೮% ರಷ್ಟು ಹೆಚ್ಚಾಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯು ದೇಶದಲ್ಲಿ ಔದ್ಯೋಗಿಕ ಕ್ರಾಂತಿಯ ಸುಭದ್ರ ಅಡಿಗಲ್ಲನ್ನು ನಿರ್ಮಿಸಿತು. ೧೯೫೬ ರಿಂದ ೧೯೬೬ ರ ವರೆಗೂ ಅಂದರೆ ಮೂರನೆಯ ಯೋಜನೆಯ ಅಂತ್ಯದವರೆಗೆ ಔದ್ಯೋಗಿಕ ಬೆಳವಣಿಗೆಯ ಗತಿಯು ೯% ರಿಂದ ೧೧% ರಷ್ಟಿದ್ದಿತು. ೧೯೬೨ ರಿಂದೀಚೆಗೆ ದೇಶವು ಎದುರಿಸಿದ ಯುದ್ಧಗಳಲ್ಲಿ ನಮ್ಮ ಔದ್ಯಮೀಕರಣದ ಪ್ರಭಾವವು ಸ್ಪಷ್ಟವಾಗಿರುವುದು. ದೇಶದ ರಕ್ಷಣೆಗೆ ಅವಶ್ಯವಾದ ಅನೇಕ ಆಯುಧ ಸಲಕರಣೆಗಳನ್ನು ತಯಾರಿಸುವಲ್ಲಿ ನಾವು ಪರಿಪೂರ್ಣತೆಯನ್ನು ಪಡೆದಿರುವೆವು.

ಔದ್ಯಮೀಕರಣದಿಂದ ತಾಂತ್ರಿಕ ಜ್ಞಾನದ ಬೆಳವಣಿಗೆಯಾಗಿ ದೇಶದಲ್ಲಿ ಕುಶಲ ತಂತ್ರಜ್ಞರ ಸಂಖ್ಯೆ ಹೇರಳವಾಗಿ ಬೆಳೆಯುತ್ತಲಿರುವದು. ಭವಿಷ್ಯದ ದೃಷ್ಟಿಯಿಂದ ಅತಿ ಮಹತ್ವದ್ದಾಗಿದೆ. ಇಂಥ ತಂತ್ರಜ್ಞರ ನಿರ್ಮಾಣ ಹಾಗೂ ವಿಕಾಸಕ್ಕಾಗಿ ದೇಶದಲ್ಲಿ ಪ್ರಯೋಗಾಲಯಗಳ ಒಂದು ಸರಮಾಲೆಯೇ ರಚಿತವಾಗಿದೆ. ಸಂಪರ್ಕ ಸಾರಿಗೆಯ ಉದ್ದಿಮೆಗಳಲ್ಲಿ ಹಾಗೂ ಕೆಲವು ಯಂತ್ರೋಪಕರಣಗಳ ಉದ್ದಿಮೆಗಳಲ್ಲಿ ದೇಶವು ಸಾಕಷ್ಟು ತಂತ್ರಜ್ಞರನ್ನು ನಿರ್ಮಿಸಿದೆ. ಸದ್ಯದಲ್ಲಿ ವಿಸ್ಫೋಟಗೊಳಿಸಲಾದ ಅಣುಶಕ್ತಿ ಹಾಗೂ ಥಂಬಾ ಪ್ರಯೋಗ ಕೇಂದ್ರದಿಂದ ಹಾರಿಸಲಾದ ಆಕಾಶಬಾಣಗಳು ನಮ್ಮ ತಂತ್ರಜ್ಞರ ಕುಶಲತೆಗೆ ಕಳಸಪ್ರಾಯವಾಗಿವೆ. ನಮ್ಮ ತಾಂತ್ರಿಕ ಪ್ರತಿಭೆಯ ಲಾಭ ಪಡೆಯಲು ಇಜಿಪ್ತ, ಇರಾನ, ಇರಾಕ್ ಹಾಗೂ ಅನೇಕ ಆಫ್ರಿಕನ್ ದೇಶಗಳು ಮುಂದೆ ಬರುತ್ತಿವೆ. ನಮ್ಮಲ್ಲಿ ತಯಾರಾಗುತ್ತಿರುವ ಸಾರಿಗೆ ಸಂಪರ್ಕ, ವಿದ್ಯುತ್ ಶಕ್ತಿಯ ಯಂತ್ರೋಪಕರಣಗಳು ಈ ಎಲ್ಲ ದೇಶಗಳ ಮಾರುಕಟ್ಟೆಗಳನ್ನು ಸೇರುತ್ತಲಿವೆ.

ಔದ್ಯಮೀಕರಣದ ಪ್ರಗತಿಯಿಂದಾಗಿ ಶಾಸ್ತ್ರೀಯ ವಿಜ್ಞಾನ ವಿಕಾಸವು ಕೃಷಿರಂಗದಲ್ಲಿಯೂ, ಚಿಕ್ಕ ಉದ್ದಿಮೆಗಳ ರಂಗದ ಮೇಲೆಯೂ ಪ್ರಭಾವ ಬೀರಲು ಸಮರ್ಥವಾಗುತ್ತಿರುವದು. ಕೃಷಿಯಲ್ಲಿ ಕೃತ್ರಿಮ ಗೊಬ್ಬರ, ಕ್ರಿಮಿನಾಶಕ, ನೀರಾವರಿ ಸವಲತ್ತು ಹಾಗೂ ಟ್ರ್ಯಾಕ್ಟರ ಮತ್ತು ಉಳಿದ ವೈಜ್ಞಾನಿಕ ಸಲಕರಣೆಗಳ ಉಪಯೋಗ ಹೆಚ್ಚುತ್ತಲಿದ್ದು ೧೯೫೧ ರಲ್ಲಿ ಕೇವಲ ೫೨ ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು ೧೯೭೧ ರಲ್ಲಿ

೧೨೭.೮ ದಶಲಕ್ಷ ಟನ್ನಗಳಷ್ಟು ಹೆಚ್ಚಿತು. ಆದರೆ ಕೃಷಿರಂಗದಲ್ಲಿರುವ ಕೆಲವು ನ್ಯೂನತೆಗಳಿಂದಾಗಿ ಕೃಷಿರಂಗದಲ್ಲಿಯ ಸುಧಾರಣೆಯ ಪೂರ್ಣ ಲಾಭವಿನ್ನೂ ದೇಶಕ್ಕೆ ದೊರೆಯದಾಗಿದೆ.

ವಿದ್ಯುತ್ ಶಕ್ತಿಯ ಪೂರೈಕೆಯು ಸುಮಾರು ೨೦೦ ಪಟ್ಟಿಗಿಂತ ಹೆಚ್ಚಾಗಿದ್ದು ದೊಡ್ಡ ಉದ್ದಿಮೆಗಳು ನೀರಾವರಿ ಹಾಗೂ ಚಿಕ್ಕ ಉದ್ದಿಮೆಗಳ ಪ್ರಗತಿಗೆ ತುಂಬಾ ನೆರವಾಗಿದೆ. ವಿದೇಶಗಳಲ್ಲಿಯೂ ಅಪರೂಪವಾಗಿರುವ ಅಣುಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಕೇಂದ್ರವನ್ನು ತಾರಾಪುರ ಎಂಬಲ್ಲಿ ಸ್ಥಾಪಿಸಲಾಗಿದೆ.

ಸರಕಾರವು ತಾಂತ್ರಿಕ ವೈಜ್ಞಾನಿಕ ಶಿಕ್ಷಣ ಹಾಗೂ ಸಾರ್ವಜನಿಕ ಆರೋಗ್ಯಗಳ ಅಭಿವೃದ್ಧಿಗೆ ವಿಶೇಷ ಮಹತ್ವ ಕೊಟ್ಟಿದುದರಿಂದ ಕೆಲಸಗಾರರ ಕುಶಲತೆಯು ಹೆಚ್ಚಿರುವದಲ್ಲದೆ ಕೆಲಸ ಮಾಡುವ ಸಾಮರ್ಥ್ಯವೂ ಹೆಚ್ಚಾಗಿರುವದು. ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ವರ್ಷವೊಂದಕ್ಕೆ ೧೦೦೦ ಕ್ಕೆ ೪೩ ರಷ್ಟಿದ್ದ ಮರಣ ಸಂಖ್ಯೆಯು ಈಗ ೧೭ಕ್ಕೆ ಇಳಿದಿದೆ. ಆರೋಗ್ಯವೃದ್ಧಿಯಾದುದರಿಂದ ಸಾಂಕ್ರಾಮಿಕ ರೋಗಗಳ ಪಿಡುಗು ತುಂಬಾ ಕಡಿಮೆಯಾಗಿ ದೀರ್ಘಾಯುಷ್ಯದಿಂದ ಜನರು ಹೆಚ್ಚು ನೆಮ್ಮದಿಯನ್ನು ಹೊಂದುವಂತಾಗಿದೆ.

ದೇಶದಲ್ಲೀಗ ಯಾಂತ್ರಿಕ ಸಲಕರಣೆಗಳು. ಕೆಲವು ವಿಶಿಷ್ಟ ತರದ ಉಕ್ಕು ಕಬ್ಬಿಣ ಹಾಗೂ ಮ್ಯಾಂಗನೀಜ ಅದುರುಗಳು, ವಿವಿಧ ತರದ ಉಡುಪುಗಳು. ಬೈಸಿಕಲ್, ಹೊಲಿಗೆ ಯಂತ್ರ, ಫೋನುಗಳು ಚಿಕ್ಕ ಉದ್ದಿಮೆಗಳು ಹಾಗೂ ಗೃಹ ಕೈಗಾರಿಕೆಯಿಂದ

ಉತ್ಪಾದಿಸುವ ಸರಕುಗಳು ಹಾಗೂ ಯಂತ್ರೋಪಕರಣಗಳ ನಿರ್ಯಾತವನ್ನು ಬಹುಮಟ್ಟಿಗೆ ಹೆಚ್ಚಿಸಲಾಗಿದೆ. ಇಲ್ಲಿಯವರೆಗೆ ಆಯಾತಮಾಡಿಕೊಳ್ಳಲಾಗುತ್ತಿದ್ದ ಅನೇಕ ತರದ ಯಂತ್ರೋಪ ಕರಣಗಳನ್ನು ನಮ್ಮಲ್ಲಿಯೇ ಉತ್ಪಾದಿಸಲಾಗುತ್ತಿದೆ. ಹೀಗಾಗಿ ನಿರ್ಯಾತ ಪ್ರಮಾಣವು ಪ್ರತಿವರ್ಷ ಹೆಚ್ಚುತ್ತಿದ್ದು ಆಯಾತದ ಪ್ರಮಾಣವು ಗಣನೀಯವಾಗಿ ಕಡಿಮೆಯಾಗುತ್ತಿರುವದು.

ಆದರೆ ನಮ್ಮ ದೇಶದ ಆರ್ಥಿಕ ಬೆಳವಣಿಗೆಯು ಕೆಲವು ಪ್ರಮುಖ ದೋಷಗಳಿಂದಾಗಿ ತನ್ನ ತೀವ್ರಗತಿಯನ್ನು ಇತ್ತೀಚಿನ ವರ್ಷಗಳಲ್ಲಿ ಎಂದರೆ. ನಾಲ್ಕನೆಯ ಯೋಜನೆಯ (೧೯೬೯–೭೪ ರಲ್ಲಿ) ಕಾಲದಲ್ಲಿ ಕಳೆದುಕೊಂಡಿರುವದನ್ನು ನಾವು ಗಮನಿ ಸಿದ್ದೇವೆ. ಇದರ ಫಲವಾಗಿ ದೇಶವು ಇಂದು ನಿರುದ್ಯೋಗ ಸಮಸ್ಯೆ. ತೀವ್ರ ಬೆಲೆಯೇರಿಕೆಯ ಸಮಸ್ಯೆ ಹಾಗೂ ಆವಶ್ಯಕ ವಸ್ತುಗಳ ಅಭಾವವೆಂಬ ಮೂರು ಬೃಹತ್ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದರಿಂದ ದೇಶದಲ್ಲಿ ಸಾಮಾಜಿಕ ಅಭದ್ರತೆಯ ವಾತಾವರಣವುಂಟಾಗಿ ಜನರ ನೈತಿಕತೆಯನ್ನು ಅಧೋಗತಿಗಿಳಿ ಸಿದೆ. ಇಂಥ ಪರಿಸ್ಥಿತಿಗೆ ಕಾರಣವಾದ ಮುಖ್ಯ ಅಂಶಗಳು ಕೆಳಗಿ ನಂತಿವೆ.

**೧. ಅತಿ ಪ್ರಸರಣ:** ಇದು ನಮ್ಮ ಆರ್ಥಿಕ ಬೆಳವಣಿಗೆಗೆ ಅಂಟಿಕೊಂಡ ಅತಿ ದೊಡ್ಡ ಜಾಡ್ಯವಿದೆನಿಸಿದೆ. ಎರಡನೆಯ ಪಂಚ ವಾರ್ಷಿಕ ಯೋಜನೆಯ ತತ್ತ್ವವನ್ನೇ ಅಪಹಾಸ್ಯಕ್ಕೆ ಗುರಿಪಡಿಸಿದೆ. ೧೯೭೪ ರ ಎಪ್ರಿಲ್ ಒಂದರಿಂದ ಜಾರಿಯಲ್ಲಿ ತಂದ ಐದ ನೆಯ ಪಂಚವಾರ್ಷಿಕ ಯೋಜನೆಯು ಸರಕಾರಿ ವಲಯದಲ್ಲಿ

ರೂ. ೩೭.೨೫೦ ಕೋಟಿಯಷ್ಟು ಬಂಡವಲ ವಿನಿಯೋಗಿಸುವ ನಿರ್ಣಯ ಮಾಡಿರುವದನ್ನು ದೇಶದಲ್ಲಿ ಜನರು ಸಂಶಯದ ದೃಷ್ಟಿಯಿಂದ ನೋಡುವ ಹಾಗೂ ಬೆಲೆಗಳ ಏರಿಕೆಗೆ ನೀಡಿದ ಆಹ್ವಾನವೆಂಬ ಭಾವನೆ ತಳೆದಿರುವದು ಸರ್ವವಿಧಿತವಿದೆ. ಇದಲ್ಲದೆ ದೇಶದಲ್ಲಿಯ ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರೂ ಸಹ ಇದು ಕೇವಲ ಭ್ರಮೆಯನ್ನುಂಟು (Illusion) ಮಾಡುವ ಪ್ರಯತ್ನವೆಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರು.

ಅತಿ ಪ್ರಸರಣದ ಈ ಜಾಡ್ಯಕ್ಕೆ ಎಡೆಕೊಡಲು ಅರ್ಥ ಶಾಸ್ತ್ರದ ಗ್ರಂಥಗಳಲ್ಲಿ ವಿವರಿಸಲಾದ ಒಂದು ಸಿದ್ಧಾಂತವನ್ನು ತಪ್ಪಾಗಿ ಅರ್ಥ ಮಾಡಿಕೊಂಡಿರುವದು ಒಂದು ಮುಖ್ಯ ಕಾರಣ ವಾಗಿದೆ. ಈ ಸಿದ್ಧಾಂತದಂತೆ ಸತತವಾಗಿ ಸಣ್ಣ ಪ್ರಮಾಣದ ಬೆಲೆಯೇರಿಕೆಯ ಪರಿಸ್ಥಿತಿಯು ಆರ್ಥಿಕ ಬೆಳವಣಿಗೆಗೆ ಪೋಷಕ ವಾಗಬಲ್ಲದು. ಅದರಿಂದ ಇದನ್ನು ಸಾಧಿಸಲು ಸರಕಾರವು ಕೊರ ತೆಯ ಹಣಕಾಸಿನ ನೀತಿಯನ್ನು ಅನುಸರಿಸಬಹುದು. ಅಂದರೆ ತನ್ನ ಎಲ್ಲ ಮೂಲಗಳಿಂದ ಬರಬಹುದಾದ ಆದಾಯಕ್ಕಿಂತ ಹೆಚ್ಚಿಗೆ ವೆಚ್ಚದ ಯೋಜನೆಗಳನ್ನು ಹಾಕಿಕೊಂಡು ಮಧ್ಯವರ್ತಿ ಬ್ಯಾಂಕಿನಿಂದ ಕಾಗದದ ಹಣವನ್ನು ಸಾಲವಾಗಿ ತಂದು ಖರ್ಚಿಸಿ ಆರ್ಥಿಕರಂಗದಲ್ಲಿ ಸಾರ್ವಜನಿಕ ಬೇಡಿಕೆಯ ಪ್ರಮಾಣವನ್ನು ಉತ್ಪಾದನೆಯ ಮಟ್ಟಕ್ಕಿಂತ ಹೆಚ್ಚಿಗೆ ಇರುವಂತೆ ಕಾಯ್ದುಕೊಳ್ಳು ವದು. ಆದರೆ ಈ ನೀತಿಯನ್ನು ಅಭಿವೃದ್ಧಿಹೊಂದಿದ ರಾಷ್ಟ್ರ ಗಳು ತಾತ್ಕಾಲಿಕ ಆರ್ಥಿಕ ಹಿನ್ನಡೆಯನ್ನನುಭವಿಸುತ್ತಿರುವ ಸಂದ ರ್ಭದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದಲ್ಲದೆ

ಅಭಿವೃದ್ಧಿಹೊಂದದ ರಾಷ್ಟ್ರಗಳಲ್ಲ. ಅಭಿವೃದ್ಧಿಹೊಂದದ ರಾಷ್ಟ್ರಗಳು ಈ ತಂತ್ರವನ್ನು ಕೆಲವು ಸೀಮಿತ ಗುರಿಗಳನ್ನು ಸಾಧಿಸಲು ಅತಿಶಯ ಜಾಗರೂಕತೆಯಿಂದ ಉಪಯೋಗಿಸಬಹುದೆಂದು ಆರ್ಥರ ಲೇವಿಸ್ ಎಂಬ ಲೇಖಕರು ಸೂಚಿಸಿದ್ದಾರೆ. ಆದರೆ ನಮ್ಮ ದೇಶದಲ್ಲಿ ಸರಕಾರವು ಕೊರತೆಯ ಹಣಕಾಸಿನ ನೀತಿಯನ್ನು ಗೊತ್ತುಗುರಿಯಿಲ್ಲದೆ ಬಳಸಿದುದು ಕಂಡುಬರುವದು. ಇದರಿಂದಾಗಿ ಅತಿ ಪ್ರಸರಣದ ಜಾಡ್ಯವು ಆರ್ಥಿಕ ರಂಗಕ್ಕೆ ಅಂಟಿಕೊಂಡಿತು. ಅತಿ ಪ್ರಸರಣದಿಂದ ಬೆಲೆಯೇರಿಕೆಯಾದಂತೆ ಹಣದ ಚಲಾವಣೆಯ ಗಾತ್ರವೂ ಕೂಡ ಹೆಚ್ಚಾಗುವದು ಆವಶ್ಯಕವಾಗುತ್ತದೆ. ಹೇಗೆಂದರೆ, ರೂ. ೧ಕ್ಕೆ ಕೊಳ್ಳುವ ವಸ್ತುಗಳ ಬೆಲೆ ರೂ. ೨ ರಷ್ಟಾದಾಗ ಆ ವಿನಿಮಯವನ್ನು ನೆರವೇರಿಸಲು ಎರಡು ರೂಪಾಯಿಯ ನೋಟುಗಳು ಅವಶ್ಯವೆನಿಸುವವು. ಹಣದ ಚಲಾವಣೆ ಹೆಚ್ಚಿದ ಪ್ರಮಾಣದಲ್ಲಿ ಉತ್ಪಾದನೆಯು ಹೆಚ್ಚಲು ಸಾಕಷ್ಟು ಅನುಕೂಲತೆಗಳು ಇಲ್ಲದಾಗ ಬೆಲೆಯೇರಿಕೆಯ ಪರಿಸ್ಥಿತಿಯುಂಟಾಗುವದು ಸಹಜ. ಇದರಿಂದ ಉತ್ಪಾದನೆಯ ವೆಚ್ಚವು ಅಧಿಕಗೊಂಡು ಜನರ ಹಾಗೂ ಕಾರ್ಮಿಕ ವರ್ಗದವರ ಜೀವನಮಟ್ಟ ಕುಸಿಯುವದು. ಸಂಘಟನೆಯ ಪ್ರಾಬಲ್ಯವುಳ್ಳ ಕಾರ್ಮಿಕ ವರ್ಗದವರು ತಮ್ಮ ವೇತನ ವೃದ್ಧಿಯನ್ನು ಪಡೆದುಕೊಳ್ಳುವರು. ಪದೇ ಪದೇ ವೇತನವೃದ್ಧಿಯಾಗುವದರಿಂದ ಉತ್ಪಾದನೆಯ ಶಕ್ತಿ ಹಾಗೂ ವೇತನ ದರಗಳಲ್ಲಿಯ ಸಮತೋಲವು ತಪ್ಪಿ ದೀರ್ಘಕಾಲೀನ ಬೆಲೆಯೇರಿಕೆಯ ಪರಿಸ್ಥಿತಿಗೆ ಎಡೆಮಾಡಿಕೊಡುವದು. ಇದಲ್ಲದೆ ಸಮಾಜದಲ್ಲಿ ಯಾರಿಗೆ ತೀವ್ರ ಬದಲಾಗುವ ಆದಾಯ

ಮೂಲಗಳಿರುವವೋ (ವ್ಯಾಪಾರಿಗಳು, ಉದ್ದಿಮೆದಾರರು, ಠೋಕ ವ್ಯಾಪಾರಿಗಳು ಹಾಗೂ ಸ್ವಂತ ಉದ್ಯೋಗಸ್ಥರು) ಅಂಥ ವರ್ಗಗಳ ಆದಾಯವು ಒಂದೇ ಸವನೆ ಹೆಚ್ಚುತ್ತಹೋಗುವದು. ಸ್ಥಿರ ಆದಾಯದವರ ಜೀವನ ಮಟ್ಟವು ಕುಸಿಯುತ್ತಲಿರುವದು. ಹೆಚ್ಚಿಗೆ ಆದಾಯವುಳ್ಳವರ ಗ್ರಾಹಕ ಶಕ್ತಿ ಹೆಚ್ಚುವದರಿಂದ ಅಭಾವ ಪರಿಸ್ಥಿತಿಯು ತೀವ್ರಗೊಂಡು ಮತ್ತೆ ಬೆಲೆಯೇರಿಕೆಗೆ ಅವಕಾಶಮಾಡಿಕೊಡುವದು. ಹೆಚ್ಚಿಗೆ ಆದಾಯ ಗಳಿಸುವ ವರ್ಗದವರು ಪರದೇಶದ ವಸ್ತುಗಳ ಬೇಡಿಕೆ ಹಾಗೂ ಐಷಾರಾಮಿನ ಸಾಧನೆಗಳ ಬೇಡಿಕೆಗಳನ್ನು ಹೆಚ್ಚಿಸುವದರಿಂದ ನಿತ್ಯ ಬಳಕೆಯ ಸಾಮಾನುಗಳನ್ನು ಉತ್ಪಾದಿಸುವ ಉದ್ದಿಮೆಗಳು ಹಾನಿಗೊಳಗಾಗುವವು. ಇದಲ್ಲದೆ, ಅತಿ ಪ್ರಸರಣದಿಂದ ಜನರ ಉಳಿತಾಯ ಮನೋಧರ್ಮದ ಮೇಲೆ ತೀವ್ರ ಪರಿಣಾಮವಾಗುವದು. ಯಾಕೆಂದರೆ, ಬೆಲೆಯೇರಿಕೆಯು ಒಂದೇ ಸವನೆ ಮುಂದುವರಿಯುತ್ತಿರುವಾಗ ತಮ್ಮ ಹಣಕಾಸಿನ ಠೇವಣಿಗಳ ಬೆಲೆ ಕಡಿಮೆಯಾಗುವ ಭಯದಿಂದ ಒಂದೇಸವನೆ ಆಸ್ತಿಪಾಸ್ತಿಗಳನ್ನು ಸಂಚಯಿಸುವದರಲ್ಲಿ, ಸರಕುಗಳ ದಾಸ್ತಾನು ಮಾಡುವದರಲ್ಲಿ ತಮ್ಮ ಅಧಿಕಗೊಂಡ ಆದಾಯವನ್ನು ವಿನಿಯೋಗಿಸುವರು. ಇದರಿಂದ ಈ ನಿಜವಸ್ತುಗಳ ಆಸ್ತಿಯ ಮಾರುಕಟ್ಟೆಯಲ್ಲಿ ಸಟ್ಟಾ ವ್ಯಾಪಾರಕ್ಕೆ ಚಾಲನೆ ದೊರಕುವದು. ಹೀಗಾಗಿ ಶಹರದಲ್ಲಿಯ ಇಮಾರತುಗಳು, ಕಟ್ಟಡದ ಪ್ಲಾಟುಗಳು, ಆಭರಣ ವಜ್ರ-ವೈಢೂರ್ಯಗಳು, ನೀರಾವರಿ ಜಮೀನುಗಳು ಇವುಗಳಲ್ಲೆಲ್ಲ ಸಟ್ಟಾ ಬಜಾರಕ್ಕೆ ಅಮಿತ ಪ್ರೋತ್ಸಾಹ ದೊರೆಯುವದು.

ಇದರಿಂದ ಹಣಕಾಸಿನ ಬಂಡವಲ ನಿರ್ಮಾಣದ ಪ್ರಮಾಣ ಕುಸಿದು ಆರ್ಥಿಕ ಬೆಳವಣಿಗೆಗೆ ಆವಶ್ಯಕವಾದ ಹಣಕಾಸಿನ ಬಂಡವಲದ ಕೊರತೆಯುಂಟಾಗುವದು. ದೇಶದಲ್ಲಿ ಶ್ರೀಮಂತ ವರ್ಗದವರು ಸಾಮಾನ್ಯವಾದ ತಮ್ಮ ಆದಾಯದಿಂದ ಉಳಿತಾಯ ಮಾಡುವ ಧೋರಣೆಯನ್ನು ಬಿಟ್ಟುಕೊಡುವರು. ಮಧ್ಯಮ ವರ್ಗದ ಜನರಲ್ಲಿ ಬೆಲೆಯೇರಿಕೆಯ ಪರಿಸ್ಥಿತಿಯಿಂದ ಉಳಿತಾಯ ಮಾಡುವ ಸಾಮರ್ಥ್ಯವೇ ಇಲ್ಲದಂತಾಗುವದು. ಇದಲ್ಲದೆ ಅತಿ ಪ್ರಸರಣದಿಂದುಂಟಾದ ಬೆಲೆಯೇರಿಕೆಯ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಸರಕಾರವು ಅನೇಕ ನಿಯಂತ್ರಣಗಳನ್ನು ಹೇರುವದರಿಂದ ಸರಕಾರಿ ನೌಕರ ವರ್ಗದಲ್ಲಿ ಲಂಚಖೋರತನದ ಪ್ರವೃತ್ತಿಯನ್ನು ಬೆಳೆಸುವದು ಹಾಗೂ ನಿಯಂತ್ರಿತ ವಸ್ತುಗಳ ಮಾರಾಟದಲ್ಲಿ ಕಪ್ಪುಪೇಟೆ, ಕಳ್ಳಸಾಗಾಣಿಕೆ ಹಾಗೂ ಕಪ್ಪುಹಣದ ಸಂಚಯಕ್ಕೆ ಎಡೆಮಾಡಿಕೊಡುವವು.

ಇದಕ್ಕೂ ಹೆಚ್ಚಿನ ಇನ್ನೊಂದು ಪರಿಸ್ಥಿತಿಯೆಂದರೆ, ಅತಿ ಪ್ರಸರಣವು ದೇಶದಲ್ಲಿ ಆಸ್ತಿ ಹಾಗೂ ಸಂಪತ್ತುಗಳ ಹಂಚುವಿಕೆಯಲ್ಲಿ ಮೂಲಭೂತ ಬದಲಾವಣೆಯನ್ನುಂಟುಮಾಡಿ ದೇಶದ ಸಾಮಾಜಿಕ ಹಾಗೂ ನೈತಿಕ ಮೌಲ್ಯಗಳನ್ನು ಬುಡಮೇಲು ಮಾಡುವದು. ಉದ್ದಿಮೆದಾರರು, ವ್ಯಾಪಾರಿಗಳು, ಸ್ವಂತ ಉದ್ಯೋಗಿಗಳು ಇಂಥವರ ಆದಾಯಗಳು ಒಂದೇ ಸವನೆ ಏರುತ್ತಿರುವುದರಿಂದ ಈ ವರ್ಗದವರಿಗೆ ಉಳಿದ ಗ್ರಾಹಕ ವರ್ಗಗಳ ಆದಾಯದ ವರ್ಗಾವಣೆಯಾಗುವದರಿಂದ ದೇಶದ ಹೆಚ್ಚಿನ ಪ್ರಮಾಣದ ಸಂಪತ್ತು ಈ ವರ್ಗದವರ ಕೈಸೇರಿ ಬಡವ ಬಲ್ಲಿದರೊಳಗಿನ ಅಂತ

ರವು ಹೆಚ್ಚಾಗಿ ಮುಂದೆ ರಾಜಕೀಯ ಘರ್ಷಣೆಗೆಡೆಮಾಡಿಕೊಡು ವದು. ಪ್ರೊ. C. N. ವಕೀಲರು ಅಭಿಪ್ರಾಯಪಟ್ಟಂತೆ ಅತಿ ಪ್ರಸರಣವು ನಿಸ್ಸಂಶಯವಾಗಿ ಸಮಾಜವಾದೀ ತತ್ತ್ವದ ವಿರೋಧಿ ಯಾಗಿದೆ,

ಅತಿ ಪ್ರಸರಣವು ಈ ರೀತಿಯಾಗಿ ದೇಶದ ಆರ್ಥಿಕ ಸ್ವಾಸ್ಥ್ಯವನ್ನು ನಾಶಪಡಿಸುವದು. ಹೀಗಿದ್ದರೂ ನಮ್ಮ ದೇಶ ದಲ್ಲಿ ಅತಿ ಪ್ರಸರಣದ ಜಾಡ್ಯವನ್ನು ತಡೆಯುವ ಪ್ರಾಮಾಣಿಕ ಪ್ರಯತ್ನವು ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ನಡೆಯು ಲಿಲ್ಲ. ಯಾಕೆಂದರೆ ಅನೇಕ ವರ್ಷಗಳವರೆಗೆ ಸರಕಾರವು ಅತಿ ಪ್ರಸರಣವಿರುವದನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಅತಿ ಪ್ರಸರಣದ ಜಾಡ್ಯವು ಎರಡನೆಯ ಯೋಜನೆಯ ಮಧ್ಯಂತರ ಕಾಲದಲ್ಲಿ ಪ್ರಾರಂಭವಾಯಿತು. ಅತಿ ಪ್ರಸರಣಕ್ಕೆ ಕಾರಣವಾದುದು ಕೊರತೆಯ ಹಣಕಾಸಿನ ನೀತಿಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಚಲಾವಣೆಯಲ್ಲಿ ಬಂದ ಹಣದ ಪ್ರಮಾಣದಲ್ಲಿ ಉತ್ಪಾದ ನೆಯು, ಮುಖ್ಯವಾಗಿ ಜನರ ಜೀವನಮಟ್ಟವನ್ನು ಸುಧಾರಿಸು ವಂಥ ಅನುಭೋಗ್ಯ ವಸ್ತುಗಳ ಉತ್ಪಾದನೆಯು, ಹೆಚ್ಚಾಗದಿರಲು ಬೆಲೆಯೇರಿಕೆಯುಂಟಾಯಿತು. ಆದರೆ ಬೆಲೆಯೇರಿಕೆಯಾದಂತೆಲ್ಲ ದೊಡ್ಡ ಪ್ರಮಾಣದಲ್ಲಿರುವ ಅಪ್ರತ್ಯಕ್ಷ ಕರಗಳ ಆದಾಯವು ಸರ ಕಾರಕ್ಕೆ ಹೆಚ್ಚುತ್ತಲಿದ್ದುದರಿಂದ ಇದೊಂದು ಯೋಜನೆಯನ್ನು ಕಾರ್ಯಗತಗೊಳಿಸಲು ಬಂಡವಲವನ್ನು ಸಂಚಯಿಸುವ ಸುಲ ಭೋಪಾಯವೆಂದು ಬಗೆದಿದ್ದರೆ ಆಶ್ಚರ್ಯವಿಲ್ಲ. ತತ್ಪರಿಣಾಮ ವಾಗಿ ಎರಡನೆಯ ಯೋಜನೆಯಲ್ಲಿ ರೂ. ೯೦೦ ಕೋಟಿಯಷ್ಟು

ಕೊರತೆಯ ಹಣಕಾಸನ್ನು ಬಳಸಿದರೆ ಮೂರನೆಯ ಯೋಜನೆಯಲ್ಲಿ ರೂ. ೧೨೫೦ ಕೋಟಿಯಷ್ಟು ಕೊರತೆಯ ಹಣಕಾಸಿನ ಬಳಕೆಯಾಯಿತು. ಇಲ್ಲಿಯವರೆಗೆ ಯೋಜನೆಗಳಿಗಾಗಿ ರೂ. ೩೦೦೦ ಕೋಟಿಗಿಂತ ಹೆಚ್ಚು ಕೊರತೆಯ ಧನವನ್ನು ಬಳಸಲಾಗಿದೆ. ೧೯೭೩-೭೪ ರ ಅವಧಿಯಲ್ಲಿ ರೂ. ೮೭ ಕೋಟಿಯಷ್ಟು ಕೊರತೆಯ ಹಣಕಾಸನ್ನು ಬಳಸಲು ನಿರ್ಣಯ ಮಾಡಿದ ಕೇಂದ್ರಸರಕಾರದ ಅರ್ಥಮಂತ್ರಿಗಳು ವರ್ಷ ಮುಗಿಯುವಷ್ಟರಲ್ಲಿ ರೂ. ೬೫೦ ಕೋಟಿಯಷ್ಟು (೭/೨ ಪಟ್ಟು) ಹೆಚ್ಚಿಗೆ ಕೊರತೆಯ ಹಣಕಾಸಿನ ಉಪಯೋಗ ಮಾಡಿಕೊಂಡಿರುವರು. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಕೇವಲ ರೂ. ೧೮೦೦ ಕೋಟಿಯಷ್ಟು ಕಾಗದದ ಹಣವಿದ್ದುದು ಈಗ (೧೯೭೪ ಅಗಸ್ಟ) ರೂ. ೯೭೯೬ ಕೋಟಿಗೆ ತಲುಪಿರುವದು. ಬೆಲೆಯೇರಿಕೆಯ ಪರಿಸ್ಥಿತಿಗೆ ಕೊರತೆಯ ಹಣಕಾಸಿನ ನೀತಿಯೇ ಕಾರಣವೆಂದು ಒಪ್ಪಿಕೊಳ್ಳುತ್ತಿರುವ ಅರ್ಥಮಂತ್ರಿಗಳಿಗೆ ಈ ನೀತಿಯನ್ನು ಕೈಬಿಡುವದು ಕಷ್ಟಕರವೆನ್ನಿಸಿದೆ. ಬಂಡವಲ ನಿರ್ಮಾಣದ ಮೇಲೆ ಅತಿಪ್ರಸರಣದ ಪರಿಣಾಮವು ಎಷ್ಟೆಂದರೆ ಎರಡನೆಯ ಯೋಜನೆಯ ಕಾಲದಲ್ಲಿ ರಾಷ್ಟ್ರೀಯ ಆದಾಯದ ೧೪% ಪ್ರಮಾಣಕ್ಕೆ ತಲುಪಿದ್ದ ಉಳಿತಾಯದ ಪ್ರಮಾಣವು ಈಗ ೧೧% ಕ್ಕೆ ಇಳಿದಿದೆ. ಆರ್ಥಿಕ ಬೆಳವಣಿಗೆಯ ಬಗೆಗೆ ಗ್ರಂಥಗಳನ್ನು ಬರೆದಿರುವ ಅನೇಕ ತಜ್ಞರು ಉಳಿತಾಯ ಪ್ರಮಾಣವು ೨೨% ದಿಂದ ೨೮% ವರೆಗೆ ನಿಲುಕುವವರೆಗೆ ನಿಜವಾದ ಆರ್ಥಿಕ ಬೆಳವಣಿಗೆಯಾಗಲಾರದೆಂದು ಅಭಿಪ್ರಾಯಪಟ್ಟಿರುವರು.

**೨. ಅಸಮರ್ಥ ಆಡಳಿತೆ:** ಎರಡನೆಯ ಮುಖ್ಯ ದೋಷವೆಂದರೆ ದೇಶದ ಆಡಳಿತ ವರ್ಗವು ಆರ್ಥಿಕ ಬೆಳವಣಿಗೆಯನ್ನು ಪ್ರಚೋದಿಸುವದರಲ್ಲಿ ಅಸಮರ್ಥವಾದುದು. ಸ್ವಾತಂತ್ರ್ಯ ನಂತರ ದೇಶದ ಆಡಳಿತವು ಬ್ರಿಟಿಶರ ಕಾಲದಲ್ಲಿ ಆಡಳಿತ ನಡೆಸಿದ ಅಧಿಕಾರಿಗಳ ಕೈಸೇರಿತು. ಈ ಅಧಿಕಾರಿಗಳು ಇಲ್ಲಿಯವರೆಗೆ ಕೇವಲ ಕಾಯ್ದೆ ಸುವ್ಯವಸ್ಥೆಯ ಹಾಗೂ ಕಂದಾಯ ವಸೂಲಿಯ ಕರ್ತವ್ಯಗಳನ್ನು ಪಾಲಿಸಲು ತರಬೇತಿ ಹೊಂದಿದವರು. ಇಂಥ ಆಡಳಿತಗಾರರು ಅಭಿವೃದ್ಧಿಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ತುಂಬಾ ಅಸಮರ್ಥತೆಯನ್ನು ಪ್ರದರ್ಶಿಸಿದ್ದಾರೆ. ಇವರಲ್ಲಿ ಅಭಿವೃದ್ಧಿ ದೃಷ್ಟಿಕೋನಕ್ಕಿಂತ ಆಡಳಿತ ದೃಷ್ಟಿಕೋನಕ್ಕೆ ಹೆಚ್ಚಿನ ಗೌರವವು, ಸಾರ್ವಜನಿಕ ಸಂಪರ್ಕವನ್ನು ನಿಷೇಧಿಸುವದು, ಜನರನ್ನು ಅಪನಂಬಿಕೆಯಿಂದ ಕಾಣುವದು ತೀರಸಾಮಾನ್ಯ. ಇವುಗಳಿಂದಾಗಿ ನಾಗರಿಕರಲ್ಲಿ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸುವ ಪ್ರವೃತ್ತಿ ಬೆಳೆದು ಬರಲಿಲ್ಲ. ಹೀಗಾಗಿ ರಾಷ್ಟ್ರದಲ್ಲಿರುವ ದುಷ್ಟಶಕ್ತಿಗಳನ್ನು ನಿಗ್ರಹಿಸಲು ಜನರು ಸರಕಾರದೊಡನೆ ಸಹಕರಿಸುವಷ್ಟು ನಿಷ್ಠೆಯೂ ಬೆಳೆದುಬರಲಿಲ್ಲ. ಇದರಿಂದಾಗಿ ಅನೇಕ ಅಭಿವೃದ್ಧಿಯೋಜನೆಗಳು ವಿಕೃತಗೊಂಡು ಕೇವಲ ಕಾಲಹರಣ ಲಂಚಖೋರತನ ಮುಂತಾದ ಪ್ರವೃತ್ತಿಗಳಿಗೆ ಎಡೆಕೊಟ್ಟಿದೆ. ಆಡಳಿತ ಯಂತ್ರವು ಅನವಶ್ಯಕವಾಗಿ ಸ್ಥೂಲಗೊಂಡಿದೆ. ಅದರ ಭಾರವು ಅಭಿವೃದ್ಧಿಯೋಜನೆಗಳಿಗೆ ಮೀಸಲಾಗಿರುವ ಹಣಕಾಸಿನ ದೊಡ್ಡ ಭಾಗವನ್ನೇ ತಿಂದು ಹಾಕುತ್ತಿದೆ. ನಮ್ಮ ಸಾರ್ವಜನಿಕ ರಂಗದಲ್ಲಿರುವ ಕೆಲವು ಮಹತ್ವದ ಉದ್ದಿಮೆ

ಗಳು ಒಂದೇ ಸವನೆ ಹಾನಿಯನ್ನು ಅನುಭವಿಸುತ್ತಿರುವದು ನಮ್ಮ ಆಡಳಿತಗಾರರ ಅಸಮರ್ಥತೆಗೊಂದು ನಿದರ್ಶನ. Y. S. ಬ್ರೆನ್ನರ್ ಎಂಬ ಲೇಖಕರು ನಾಗರಿಕ ಆಡಳಿತಗಾರರು ಸಾಮ್ರಾಜ್ಯ ಶಾಹಿಯಿಂದ ಮುಕ್ತಗೊಂಡ ಅನೇಕ ಹಿಂದುಳಿದ ದೇಶಗಳಲ್ಲಿ ಜನತೆಯ ಹಿತವನ್ನು ನಿರ್ಲಕ್ಷಿಸಿ ತಮ್ಮ ಸುಖದ ಕಡೆಗೆಯೇ ಹೆಚ್ಚು ಲಕ್ಷ್ಯ ಪೂರೈಸುವ ಪ್ರವೃತ್ತಿಯನ್ನು ಪದರ್ಶಿಸುವದನ್ನು ಕಟುವಾಗಿ ಟೀಕಿಸಿದರು. ದುರ್ದೈವದಿಂದ ಇಂಥ ಆಡಳಿತಗಾರರನ್ನು ನಿಯಂತ್ರಿಸುವ ರಾಜಕೀಯ ಮುಖಂಡರೂ ಅದೇ ದಾರಿಯನ್ನು ಅನುಸರಿಸುತ್ತಿದ್ದು ಜನಸಾಮಾನ್ಯರ ಹಿತವನ್ನು ನಿರ್ಲಕ್ಷಿಸುತ್ತಿರುವದು ಕಂಡುಬರುತ್ತಿದೆ.

**೩. ಸಾಮಾಜಿಕ ಪ್ರಜ್ಞೆಯ ಅಭಾವ :** ಮೂರನೆಯದಾಗಿ ಆರ್ಥಿಕ ಬೆಳವಣಿಗೆಯು ಸುಗಮಗೊಳ್ಳಲು ದೇಶದಲ್ಲಿ ಕೆಲವು ಸಾಮಾಜಿಕ ಸ್ಥಿತ್ಯಂತರಗಳಾಗುವದು ಅವಶ್ಯವಾಗಿದೆ. ಆರ್ಥರ ಲೆವಿಸ್‌ರು ಹೇಳುವಂತೆ, ಜನರಲ್ಲಿ ಆರ್ಥಿಕ ಮನೋಧರ್ಮ ಬೆಳೆದುಬರಬೇಕು. ಅಂದರೆ ಪ್ರತಿಯೊಂದು ಕಾರ್ಯ ಮಾಡುವಾಗ ಅದರ ಆರ್ಥಿಕ ಪರಿಣಾಮಗಳ ಕಡೆಗೆ ಲಕ್ಷ್ಯ ಪೂರೈಸಬೇಕು. ನಮ್ಮ ಸಮಾಜವು ಇನ್ನೂ ವ್ಯಕ್ತಿ ಹಾಗೂ ಕುಟುಂಬ ಪ್ರಧಾನ ದೇಶವಾಗಿದೆ. ಸಾಮಾಜಿಕ ಹಿತ ಅಥವಾ ವ್ಯಕ್ತಿ ಹಿತ ಹಾಗೂ ರಾಷ್ಟ್ರದ ಹಿತ ಒಂದೇ ಎಂಬ ಸಮಗ್ರ (Macro) ದೃಷ್ಟಿಯಿಂದ ವಿಚಾರಿಸುವವರ ಸಂಖ್ಯೆ ಬೆಳೆದು ಬರಲಿಲ್ಲ. ದೇಶದ ಆರ್ಥಿಕ ಅಭಿವೃದ್ಧಿಗೆ ದೇಶ ಹಾಗೂ ಸಮಾಜಹಿತದ ಮನೋಧರ್ಮ ಬೆಳೆಯುವದು ಅವಶ್ಯ. ಅದಕ್ಕೆ ಜನರಲ್ಲಿ ಸಮಾಜದ

ಹಿತದಲ್ಲಿ ತನ್ನ ಹಿತವಿದೆ ಎಂಬ ಅರಿವುಂಟಾಗಬೇಕು, ಜಪಾನದ ಆರ್ಥಿಕ ಬೆಳವಣಿಗೆಯು ಸುಗಮವಾಗಲು ಅಲ್ಲಿಯ ಜನತೆಯಲ್ಲಿ ದೇಶಪ್ರೇಮ ಸಾಮಾಜಿಕ ಪ್ರಜ್ಞೆ ಹಾಗೂ ಆರ್ಥಿಕ ಬೆಳವಣಿಗೆ ಸಾಧಿಸುವಲ್ಲಿ ತಾವೆಲ್ಲ ಒಂದು ಎಂಬ ಮನೋಧರ್ಮವು ಬಹಳ ಸಹಾಯಕವಾಯಿತೆಂಬುದು ತಜ್ಞರ ಅಭಿಮತ. ಆದರೆ ನಮ್ಮ ದೇಶದಲ್ಲಿ ಜಾತಿ, ಮತ, ಪಂಥ, ಭಾಷೆ ಮುಂತಾದ ಸಮಾಜವನ್ನು ವಿಚ್ಛಿನ್ನಗೊಳಿಸುವ ಶಕ್ತಿಗಳ ಪ್ರಾಬಲ್ಯ ಹೆಚ್ಚುತ್ತಲೆ ಇರುವದು. ಆರ್ಥಿಕ ಬೆಳವಣಿಗೆ ತ್ವರಿತವಾಗಲು ಸಮಾಜದ ಮೇಲಿನ ಸ್ತರಗಳಿಗೆ ಅಂದರೆ ಆಡಳಿತ, ವಿಜ್ಞಾನ ಹಾಗೂ ಉಳಿದ ಉನ್ನತ ಹುದ್ದೆಗಳಿಗೆ ಕೆಳಗಿನ ಸ್ತರಗಳಿಂದ ಜನರು ತಮ್ಮ ತಜ್ಞತೆ ಹಾಗೂ ನೈಪುಣ್ಯಗಳ ಬಲದಿಂದ ಒಂದೇ ಸವನೆ ಸೇರಲು ಅವಕಾಶವಿರಬೇಕು. ಆದರಂತೆ ಆ ವರ್ಗಗಳಿಗೆ ಸೇರಿದ ಜನರಲ್ಲಿ ಕಡಿಮೆ ಸಾಮರ್ಥ್ಯದವರು ಕೆಳಗಿನ ವರ್ಗಕ್ಕೆ ಇಳಿಯುವಂಥ ಸ್ವತಂತ್ರ ಚಲನ ವಲನಯುಳ್ಳ ಸಮಾಜ ಅವಶ್ಯ. ಇಂಥ ಚಲನವಲನದಿಂದ ಮೇಲಿನ ವರ್ಗದ ಸಾಮರ್ಥ್ಯ ಒಂದೇ ಸವನೆ ಹೆಚ್ಚಿ ಆರ್ಥಿಕ ಬೆಳವಣಿಗೆ ಫಲಕಾರಿಯಾಗುವದು. ಆದರೆ ನಮ್ಮ ದೇಶದಲ್ಲಿಯ ಜಾತೀಯತೆ, ಹಾಗೂ ಕೆಲವು ಧಾರ್ಮಿಕ ಭಾವನೆಗಳು ಇಂಥ ಚಲನ ವಲನವನ್ನು ಪ್ರೋತ್ಸಾಹಿಸುವದಿಲ್ಲ.

**೪. ಏರಿದ ಜನಸಂಖ್ಯಾ ಪ್ರಮಾಣ :** ನಾಲ್ಕನೆಯ ದೋಷವು ಮಿತಿಮೀರಿದ ಜನಸಂಖ್ಯಾ ಬೆಳವಣಿಗೆಯಿಂದ ಉಂಟಾಗಿದೆ. ಪಂಚವಾರ್ಷಿಕ ಯೋಜನೆಗಳನ್ನು ರಚಿಸುವಾಗ, ಜನಸಂಖ್ಯೆಯ ಬೆಳವಣಿಗೆಯ ವೇಗವನ್ನು ೧.೬% ಎಂದು ಗ್ರಹಿಸ

ಲಾಗಿತ್ತು. ಆದರೆ ಮುಂದೆ ಎರಡನೆಯ ಹಾಗೂ ಮೂರನೆಯ ಯೋಜನೆಗಳ ಕಾಲದಲ್ಲಿ ಜನಸಂಖ್ಯೆಯು ೨.೪% ದಂತೆ ಬೆಳೆಯುತ್ತಿರುವದು ಕಂಡುಬಂದಿತು. ಇದರಿಂದ ವಾರ್ಷಿಕ ಬೆಳವಣಿಗೆಯ ಗತಿಯು ಕುಂಠಿತವಾಯಿತು. ಜನಸಂಖ್ಯೆಯ ತೀವ್ರ ಹೆಚ್ಚಳದಿಂದ ತಲಾ ಆದಾಯವು ಸ್ಥಿರ ಪರಿಸ್ಥಿತಿಗೆ ಸಿಲುಕಿಕೊಂಡಿತು. ಆರ್ಥಿಕ ಬೆಳವಣಿಗೆಯ ವಿಶ್ಲೇಷಣೆಯಲ್ಲಿ ಜನಸಂಖ್ಯೆಯ ಬೆಳವಣಿಗೆಗೆ ಅನುಗುಣವಾಗಿ ಮೂರು ಪರಿಸ್ಥಿತಿಗಳನ್ನು ವಿಂಗಡಿಸುವರು. ಮೊದಲನೆಯ ಪರಿಸ್ಥಿತಿಯಲ್ಲಿ ಜನನ ಹಾಗೂ ಮರಣ ಸಂಖ್ಯೆಗಳೆರಡೂ ಹೆಚ್ಚಿನ ಪ್ರಮಾಣದಲ್ಲಿರುವವು. ಎರಡನೆಯ ಪರಿಸ್ಥಿತಿಯು ಆರ್ಥಿಕ ಅಭಿವೃದ್ಧಿಯ ಯಶಸ್ಸಿನ ದೃಷ್ಟಿಯಿಂದ ಮಹತ್ವವಾದುದು. ಆರ್ಥಿಕ ಬೆಳವಣಿಗೆಯು ಮುಂದುವರಿದಂತೆ ಮರಣ ಪ್ರಮಾಣವು ಕಡಿಮೆಯಾಗುತ್ತ ಹೋಗಿ ಜನನ ಪ್ರಮಾಣವು ಸ್ಥಿರಪರಿಸ್ಥಿತಿಯಲ್ಲಿರುವದು. ಇದರಿಂದ ಜನಸಂಖ್ಯೆಯು ಒಂದೇಸವನೆ ಏರುತ್ತ ಹೋಗಿ ಆರ್ಥಿಕ ಬೆಳವಣಿಗೆಯ ವೇಗದ ಮೇಲೆ ಪರಿಣಾಮ ಮಾಡುವದು. ಇದೊಂದು ತೀರ ಸ್ಫೋಟಕ ಪರಿಸ್ಥಿತಿಯೆನ್ನಬಹುದು. ಈ ಪರಿಸ್ಥಿತಿಯನ್ನು ಯೋಗ್ಯ ರೀತಿಯಿಂದ ಎದುರಿಸುವಲ್ಲಿ ಯಶಸ್ವಿಯಾದಾಗ ಅಭಿವೃದ್ಧಿಯ ಕೊನೆಯ ಘಟ್ಟದಲ್ಲಿ ಜನನ ಹಾಗೂ ಮರಣ ಪ್ರಮಾಣಗಳು ಸಾವಿರಕ್ಕೆ ೧೫ ರಷ್ಟು ಸ್ಥಿರಗೊಳ್ಳುವವು. ಭಾರತವು ಇಂದು ಮಧ್ಯಂತರ ಪರಿಸ್ಥಿತಿಯನ್ನು ಎದುರಿಸುತ್ತಿರುವದು. ಆದರಿಂದ ಜನನ ಪ್ರಮಾಣವನ್ನು ಕಡಿಮೆಗೊಳಿಸಿ ಆರ್ಥಿಕ ಬೆಳವಣಿಗೆಯ ವೇಗವನ್ನು ತೀವ್ರಗೊಳಿಸಲು ಕುಟುಂಬ ಯೋಜನೆಯನ್ನು ಯಶಸ್ಸುಗೊಳಿಸುವದು ಅತ್ಯವಶ್ಯವೆನಿಸಿದೆ.

ಸಮಾಜವಾದಿ ತತ್ತ್ವವನ್ನಾಧರಿಸಿದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಅನೇಕ ನಿಯಮ ನಿಬಂಧನೆಗಳನ್ನು ಸರಕಾರವು ಜಾರಿಯಲ್ಲಿ ತಂದಿದೆ. ಅಲ್ಲದೆ ಯೋಜನೆಯ ಸಿದ್ಧಾಂತದಲ್ಲಿ ಕೆಲವು ಕಟ್ಟಳೆಗಳನ್ನು ಪಾಲಿಸುವದು ಆವಶ್ಯಕವೆನ್ನಿಸುವದು. ಇಂಥ ನಿಬಂಧನೆಗಳಲ್ಲಿ ಲೈಸನ್ಸಿಂಗ ಪದ್ಧತಿ ಬಹುಮಹತ್ವದ್ದಾಗಿದೆ. ಇದರ ಮೂಲ ಉದ್ಯೇಶವು ನಿಜವಾಗಿಯೂ ಆರ್ಥಿಕ ಬೆಳವಣಿಗೆಗೆ ಪೋಷಕವಾಗಿದೆ. ಬೆಳವಣಿಗೆಯಲ್ಲಿ ಪ್ರಾದೇಶಿಕ ಸಮತೋಲ ವನ್ನು ಸಾಧಿಸುವದು, ಬಂಡವಲ ವಿನಿಯೋಗದಲ್ಲಿ ವೈವಿಧ್ಯ ಹಾಗೂ ಪಸರಿಸುವಿಕೆಯನ್ನು ಸಾಧಿಸುವದು, ತುಟಾಗ್ರತೆಯಲ್ಲಿ ರುವ ಅನೇಕ ಔದ್ಯೋಗಿಕ ಕಚ್ಚಾ ಸರಕುಗಳಾದ ಉಕ್ಕು, ಕಲ್ಲಿದ್ದಲಿ, ವಿದ್ಯುತ್ತು ಹಾಗೂ ವಿದೇಶದಿಂದ ಆಮದು ಮಾಡುವ ಯಂತ್ರ ಗಳನ್ನು ಯೋಜನೆಯಲ್ಲಿ ಅಡಕವಾದ ಉದ್ದಿಮೆಗಳ ಅಭಿವೃದ್ಧಿಗೆ ಸಹಾಯಕವಾಗುವಂತೆ ವಿತರಣೆಮಾಡುವದು ಇವನ್ನು ಅದು ಒಳ ಗೊಳ್ಳುತ್ತದೆ. ಆದರೆ ಈ ಲೈಸನ್ಸಿಂಗ ನೀತಿಯು ಆರ್ಥಿಕ ಮಹತ್ವ ವನ್ನು ಬಹುಮಟ್ಟಿಗೆ ಕಳೆದುಕೊಂಡು ರಾಜಕೀಯ ಒತ್ತಡಗಳಿಗೆ ಗುರಿಯಾಗಿರುವದರಿಂದ ಉದ್ದೇಶಿತ ಗುರಿಗಳನ್ನು ಸಾಧಿಸುವಲ್ಲಿ ತೀರಾ ವಿಫಲವಾಗಿದ್ದುದನ್ನು ಪ್ರೊ. ಹಜಾರಿಯವರ ಅಧ್ಯಕ್ಷತೆ ಯಲ್ಲಿ ರಚಿಸಲಾದ ಸಮಿತಿಯು ಬಯಲಿಗೆಳೆದಿದೆ. ಲೈಸೆನ್ಸಿಂಗ ಪದ್ಧತಿಯು ಆರ್ಥಿಕ ಬೆಳವಣಿಗೆಯ ವೇಗವನ್ನು ಕುಂಠಿತಗೊಳಿಸಿ ರಾಜಕಾರಣಿಗಳ ನೈತಿಕ ಪತನಕ್ಕೂ ಕಾರಣವಾಗಿದೆ. ಆದುದರಿಂದ ಹದಿನೆಂಟನೆಯ ಶತಮಾನದಲ್ಲಿ ಇಂಗ್ಲಂಡ ಆರ್ಥಿಕ ಬೆಳವಣಿ ಗೆಯ ಹೊಸ್ತಿಲಲ್ಲಿರುವಾಗ ಆಡಮ್ ಸ್ಮಿಥರು ಸೂಚಿಸಿದಂತೆ ಇಂಥ

ಕೃತ್ರಿಮ ನಿಬಂಧನೆಗಳಿಂದ ಆರ್ಥಿಕ ರಂಗವನ್ನು ಮುಕ್ತಗೊಳಿಸಿ ವೇಗದಿಂದ ಆರ್ಥಿಕ ಬೆಳವಣಿಗೆಯು ಮುನ್ನುಗ್ಗಲು ಅವಕಾಶ ಮಾಡಿಕೊಡುವ ಪ್ರಸಂಗ ಈಗ ಉಂಟಾಗುತ್ತಲಿದೆ.

**೫. ನಿರುದ್ಯೋಗ ಸಮಸ್ಯೆ :** ಕೊನೆಯದಾಗಿ ದೇಶದಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗ ಸಮಸ್ಯೆಯು ನಮ್ಮ ಆರ್ಥಿಕ ಬೆಳವಣಿಗೆಯ ಒಂದು ಮಹತ್ತರ ದೋಷವನ್ನು ಎತ್ತಿ ತೋರಿಸುತ್ತದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದಲೂ ಇದು ಬಿಡಿಸಲಾರದ ಸಮಸ್ಯೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಯೋಜನೆಯ ವೇಗವು ಕಡಿಮೆಯಾದುದರಿಂದ ಸ್ಫೋಟಕದ ಪರಿಸ್ಥಿತಿಗೆ ಸಿಲುಕಿದೆ. ಈ ಪರಿಸ್ಥಿತಿಯನ್ನು ಎದುರಿಸಲು ಸ್ವಂತ ಉದ್ಯೋಗಗಳನ್ನು ಕೈಕೊಳ್ಳಲು ಅನುಕೂಲವಾಗುವಂತೆ ಶಿಕ್ಷಣ ಪದ್ಧತಿಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವದು ಹಾಗೂ ಚಿಕ್ಕ ಉದ್ದಿಮೆಗಳನ್ನು ಸ್ಥಾಪಿಸುವದಕ್ಕೆ ಎಲ್ಲ ತರದ ಸವಲತ್ತುಗಳನ್ನು ಒದಗಿಸುವದು ಮಹತ್ವದ್ದಾಗಿದೆ. ನಮ್ಮ ಜನಸಂಖ್ಯೆಯನ್ನು ಭಂಡವಲದಂತೆ ಉಪಯೋಗಿಸಬಹುದಾದ ಒಂದು ವಿಶಾಲ ಯೋಜನೆಯನ್ನು ಕೈಕೊಳ್ಳುವದು ಅವಶ್ಯ.

ಇಂಥ ಅನೇಕ ದೋಷಗಳಿಂದ ತೀವ್ರವಾಗಿ ಕುಂಠಿತಗೊಂಡ ನಮ್ಮ ಆರ್ಥಿಕ ಬೆಳವಣಿಗೆಯು ಮೂಲಭೂತವಾಗಿ ಸುಭದ್ರ ತಳಪಾಯದ ಮೇಲೆ ನಿಂತಿದೆ ಎಂಬುದನ್ನು ಎಲ್ಲ ಆರ್ಥಿಕ ಬೆಳವಣಿಗೆಯ ತತ್ತ್ವವನ್ನಭ್ಯಸಿಸಿದ ತಜ್ಞರೂ ಅಭಿಪ್ರಾಯ ಪಡುವರು. ಸಮುದ್ರ ಮಂಥನದಿಂದ ಅಮೃತವು ಬರುವದಕ್ಕಿಂತ ಮೊದಲು

ಹಾಲಾಹಲವು ಬಂದಿತೆಂಬುದು ನಮ್ಮ ಜನರ ಧಾರ್ಮಿಕ ನಂಬುಗೆ ಯಾಗಿದೆ. ಅಂತೆಯೇ ನಮ್ಮ ದೇಶದಲ್ಲಿ ಈ ದೋಷಗಳನ್ನೆಲ್ಲ ಪರಿಹರಿಸಿ ಬೆಳವಣಿಗೆಯ ವೇಗವನ್ನು ತೀವ್ರಗೊಳಿಸುವದು ಸಾಧ್ಯ. ಇದನ್ನು ನಿಷ್ಠೆ, ಪ್ರಾಮಾಣಿಕತನ ರಾಷ್ಟ್ರಪ್ರೇಮ ಹಾಗೂ ಸತತೋದ್ಯೋಗದಿಂದ ನಾವೆಲ್ಲರೂ ಒಂದಾಗಿ ನೆರವೇರಿಸಿದರೆ ಆರ್ಥಿಕ ಪ್ರಗತಿಯ ವೇಗವು ತೀವ್ರಗೊಂಡು ಮುಂದಿನ ೧೫–೨೦ ವರ್ಷಗಳಲ್ಲಿ ಈಗಾಗಲೇ ಅಭಿವೃದ್ಧಿಗೊಂಡ ಜಪಾನ, ರಶಿಯಾ, ಅಮೇರಿಕೆಗಳಂಥ ದೇಶಗಳ ಪಂಕ್ತಿಯಲ್ಲಿ ಭಾರತವು ಸ್ಥಾನಪಡೆ ಯುವದರಲ್ಲಿ ಏನೇನೂ ಸಂಶಯವಿಲ್ಲ. ಇದನ್ನು ಸಾಧಿಸುವವರೆಗೆ ನಮ್ಮ ರಾಜಕೀಯ ಸ್ವಾತಂತ್ರ್ಯದ ಗುರಿಯನ್ನು ಸಾಧಿಸಿದಂತಾ ಗದು ಎಂಬುದು ಸ್ಪಷ್ಟ.

## ೫. ನಮ್ಮ ಕರ್ತವ್ಯ

ಇಂಥ ಪ್ರಸಂಗದಲ್ಲಿ ನಮ್ಮ ಕರ್ತವ್ಯವೇನು ? ಎಂಬುದನ್ನು ಸರಿಯಾಗಿ ಅರಿತುಕೊಳ್ಳಬೇಕು. ಯಾಕೆಂದರೆ ಆರ್ಥಿಕ ಬೆಳವಣಿ ಗೆಯು ಸಾಮೂಹಿಕವಾಗಿ ಸಾಧಿಸುವಂಥದು. ಈ ಕಾರ್ಯದಲ್ಲಿ ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಒಂದು ಸ್ಥಾನವಿದೆ.

೧. ನಮ್ಮ ದೇಶದಲ್ಲಿಯ ಅತಿ ಪ್ರಸರಣವನ್ನು ತಡೆಯಲು ಪ್ರತಿಯೊಬ್ಬರೂ ಸರಕಾರದೊಡನೆ ಸಹಕರಿಸಬೇಕು ಹಾಗೂ ಸರ ಕಾರವು ಅತಿ ಪ್ರಸರಣಕ್ಕೆ ಎಡೆಕೊಡುವ ನೀತಿಯನ್ನು ಪುರಸ್ಕರಿ

ಸಿದರೆ ಪ್ರಬಲವಾಗಿ ವಿರೋಧಿಸಬೇಕು. ದೇಶದ ಸಾರ್ವಜನಿಕ ಅಭಿಪ್ರಾಯವನ್ನು ಈ ದಿಶೆಯಲ್ಲಿ ನಿರೂಪಿಸಲು ಸರ್ವ ಪ್ರಯತ್ನ ಮಾಡಬೇಕು. ಈ ವಿಷಯದಲ್ಲಿ ಸಿರಿವಂತ ವರ್ಗದ ಜವಾಬ್ದಾರಿಯು ಹೆಚ್ಚಿನದು. ಮೊನ್ನೆ ತಾನೇ ಬರೆದ ಲೇಖನದಲ್ಲಿ ಪ್ರೊ. C. N. ವಕೀಲರು ಎಚ್ಚರಿಸಿದಂತೆ, ರೂಪಾಯಿಯ ಬೆಲೆ ಕಡಿಮೆಯಾಗುತ್ತ ಶೂನ್ಯಕ್ಕೆ ತಲುಪಿದರೆ ಸಿರಿವಂತರಿಗೇ ಹೆಚ್ಚಿನ ಹಾನಿ. ತಮ್ಮ ಎಲ್ಲ ಆಸ್ತಿಗಳನ್ನು ಸ್ಥಿರಜಿಂದಗಿಯಲ್ಲಿ ಮಾರ್ಪಡಿಸುವದು ಶಕ್ಯವಿಲ್ಲವಷ್ಟೇ! ಅಲ್ಲದೆ, ಇಂಥ ಪರಿಸ್ಥಿತಿಯಿಂದ ಉಂಟಾಗಬಹುದಾದ ಸಾಮಾಜಿಕ ಅಶಾಂತಿಯೂ ಅವರ ಆಸ್ತಿಪಾಸ್ತಿಗಳಿಗೆ ಹೆಚ್ಚಿನ ಹಾನಿಯನ್ನುಂಟುಮಾಡುವಲ್ಲಿ ಸಂಶಯವಿಲ್ಲ.

೨. ದೇಶದಲ್ಲಿ ಎಲ್ಲತರದ ಸರಕು ಸೇವೆಗಳ ಉತ್ಪಾದನೆಗಳನ್ನು ಒಂದೇ ಸವನೆ ಹೆಚ್ಚಿಸುವದರಲ್ಲಿ ಸರಕಾರ, ಉದ್ದಿಮೆದಾರರು, ಕೃಷಿಕರು ಹಾಗೂ ಉಳಿದ ನಾಗರಿಕರು ಸಹಕರಿಸುವದು ಅತ್ಯವಶ್ಯ. ಏಕೆಂದರೆ ಅತಿ ಪ್ರಸರಣದ ಕೊನೆಯ ಪರಿಹಾರ ಉತ್ಪಾದನೆಯ ಹೆಚ್ಚಳವಾಗಿದೆ.

೩. ದುಂದುವೆಚ್ಚಗಳನ್ನು (ಅನುತ್ಪಾದಕ ವೆಚ್ಚ) ಸರಕಾರ ಹಾಗೂ ನಾಗರಿಕರು ಸಂಪೂರ್ಣ ಕಡಿಮೆಮಾಡಬೇಕು. ಬಂಡವಲ ನಿರ್ಮಾಣಕ್ಕೆ ಅನುಕೂಲವಾಗುವಂತೆ ನಮ್ಮ ಆದಾಯದಿಂದ ಸಾಧ್ಯವಿದ್ದಷ್ಟು ಹಣದ ಉಳಿತಾಯಮಾಡಿ ಬ್ಯಾಂಕಗಳಲ್ಲಿ ಠೇವಣಿ ರೂಪದಲ್ಲಿ ಇಲ್ಲವೆ ನೇರವಾಗಿ ಚಿಕ್ಕದೊಡ್ಡ ಉದ್ದಿಮೆಗಳಲ್ಲಿ ತೊಡಗಿಸುವದು ಆವಶ್ಯಕವು.

೪. ಸಾಮಾಜಿಕತೆ ಅಥವಾ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವದು. ಇಂದಿನ ವೈಜ್ಞಾನಿಕ ಯುಗದಲ್ಲಿ ವ್ಯಕ್ತಿಹಿತ ಅಥವಾ ಕುಟುಂಬದ ಹಿತ ದೇಶದ ಹಿತದಿಂದ ಬೇರ್ಪಡಿಸಲಾರದಷ್ಟು ಒಂದಾಗಿವೆ ಎಂಬುದನ್ನು ಅರಿತುಕೊಂಡು ದೇಶದ ಹಿತಕ್ಕೆ ಪೋಷಕವಾಗುವ ಯಾವುದೇ ಕಾರ್ಯಕ್ರಮಗಳನ್ನು ಉತ್ಸಾಹದಿಂದ ಯಶಸ್ವಿಗೊಳಿಸಲು ಪ್ರಯತ್ನಿಸಬೇಕು. ಸಾಮಾಜಿಕ ಪ್ರಜ್ಞೆಯೆಂದರೆ ನಾವು ತಿಳಿದುಕೊಂಡ ವೈಜ್ಞಾನಿಕ ಹಾಗೂ ಉಳಿದ ಜ್ಞಾನಗಳನ್ನು ನೆರೆಯವರೊಡನೆ ಹಂಚಿಕೊಳ್ಳುವದು; ಇನ್ನೊಬ್ಬರಿಗೆ ತಿಳಿಯದಂತೆ ಬಚ್ಚಿಟ್ಟುಕೊಳ್ಳುವದಲ್ಲ ! ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ತಜ್ಞರನೇಕರು ವೈಜ್ಞಾನಿಕ ವಿಷಯಗಳಲ್ಲಿ ಅಂತರಾಷ್ಟ್ರೀಯ ಪ್ರಜ್ಞೆಯನ್ನು ಪ್ರದರ್ಶಿಸುತ್ತಿರುವಾಗ ನಮ್ಮಲ್ಲಿ ರಾಷ್ಟ್ರೀಯ ಪ್ರಜ್ಞೆಯೂ ಬೆಳೆಯದಿದ್ದರೆ ನಾವು ಅವಹೇಳನೆಗೀಡಾಗುವದರಲ್ಲಿ ಸಂಶಯವಿಲ್ಲ.

೫. ಸರಕಾರವು ಜನಸಂಖ್ಯಾ ನಿಯಂತ್ರಣಕ್ಕಾಗಿ ಪ್ರಯತ್ನಿಸುತ್ತಿರುವಲ್ಲಿ ಸಕ್ರಿಯವಾಗಿ ಸಹಕರಿಸಬೇಕು. ಹಾಗೂ ಜನರಲ್ಲಿ, ಅದರಲ್ಲೂ ಕೃಷಿಕರಲ್ಲಿ, ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವಲ್ಲಿ ಎಲ್ಲರೂ ಸಹಕರಿಸಬೇಕು.

೬. ನಮ್ಮ ದೃಷ್ಟಿಕೋನದಲ್ಲಿ ರಾಜಕೀಯತೆಯನ್ನು ಕಡಿಮೆಮಾಡಿ ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾದ ಧೋರಣೆಯನ್ನು ಪ್ರಬಲಗೊಳಿಸಿಕೊಳ್ಳುವದು ಅತ್ಯವಶ್ಯ. ಯಾಕೆಂದರೆ, ನಮ್ಮ ದೇಶದಮಟ್ಟಿಗಂತೂ ರಾಜಕೀಯ ಚೌಕಟ್ಟು

ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಸಾಧನವಲ್ಲದೆ ಅದೇ ಒಂದು ಸಾಧ್ಯವಲ್ಲ ! ಆದುದರಿಂದ ಪ್ರಜಾಪ್ರಭುತ್ವದ ರಾಜಕೀಯ ಚೌಕಟ್ಟಿನಲ್ಲಿ ತೀವ್ರವಾಗಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ವಿಫಲವಾದರೆ ನಮ್ಮ ರಾಜಕೀಯ ವ್ಯವಸ್ಥೆಯೇ ಗಂಡಾಂತರವನ್ನೆದುರಿಸುವ ಸಾಧ್ಯತೆಯಿದೆ. ವಿವಿಧ ದೇಶಗಳ ಆರ್ಥಿಕ ಬೆಳವಣಿಗೆಯ ಇತಿಹಾಸವನ್ನು ಅಭ್ಯಸಿಸುವದರಿಂದ ಇದು ಮನವರಿಕೆಯಾಗುವದು.

---

# ಉಪನ್ಯಾಸ ಗ್ರಂಥಮಾಲೆಯ
# ಇತ್ತೀಚಿನ ಪ್ರಕಟನೆಗಳು

**ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ**

೧) ಕನ್ನಡದಲ್ಲಿ ತ್ರಿಪದಿ ಸಾಹಿತ್ಯ —ಎಸ್. ಎಸ್. ಕೋಟಿನ

೨) ಕನ್ನಡ ಸಾಹಿತ್ಯದಲ್ಲಿ ದುರಂತ ದೃಷ್ಟಿ —ಎಚ್. ಜಿ. ಲೋಕೂರ

೩) ದ್ರಾವಿಡ ಭಾಷೆಗಳು —ಸಂಗಮೇಶ ಸವದತ್ತಿಮಠ

೪) ಪೋಲಿಯೋ ಮೈಲೈಟಿಸ್ —ಎಸ್. ಜಿ. ನಾಗಲೋಟಿಮಠ

೫) ಕಾರ್ಮಿಕರ ಸಮಸ್ಯೆಗಳು —ಎಸ್. ಜಿ. ಕರಭಂಟನಾಳ

೬) ಅನುಭಾವಿ ಕವಿ ಕಡಕೋಳ ಮಡಿವಾಳಪ್ಪ —ಲಿಂಗಣ್ಣ ಸತ್ಯಂಪೇಟೆ

೭) ಅಣಬೆಗಳು —ಎಂ. ಎಸ್. ಎಸ್. ರಾವ್

೮) ಜಗನ್ನಾಥ ದಾಸರ ಹಿರಿಮೆ —ವಸಂತ ಕುಷ್ಟಗಿ

೯) ಕಿವಿ, ಮೂಗು, ಗಂಟಲಿನ ಸಾಮಾನ್ಯ ರೋಗಗಳು —ಎಂ. ವ್ಹಿ. ವೆಂಕಟೇಶಮೂರ್ತಿ

೧೦) ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು —ಎಸ್. ವಾಯ್. ಗುಬ್ಬಣ್ಣವರ

---

ವ್ಯಾಸಂಗವಿಸ್ತರಣ — ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩